ಯಕ್ಷಗಾನ ಪ್ರಸಂಗ

# ಆಂಜನೇಯ ಪರಾಜಯ


ಕವಿ

## ಬೆಳಸಲಿಗೆ ಗಣಪತಿ ಹೆಗಡೆ



ಅಂತರಜಾಲ ಆವೃತ್ತಿ ಪ್ರಕಾಶಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಜೂನ್ ೨೦, ೨೦೨೧

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com



## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರು ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.

ಶ್ರೀಧರ ಡಿ. ಎಸ್.
ಪ್ರಧಾನ ಸಂಪಾದಕರು

ಗಿಂಡೀಮನೆ ಮೃತ್ಯುಂಜಯ
ಸಹ ಸಂಪಾದಕರು

ರವಿ ಮಡೋಡಿ
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನುಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು

ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ

ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ

ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

೧. ಬೆಳಸಲಿಗೆ ಗಣಪತಿ ಹೆಗಡೆ ಕೃತಿ ಪ್ರಕಾಶನ, ಸಿದ್ದಾಪುರ, ಉತ್ತರಕನ್ನಡ ೧೯೯೯ರಲ್ಲಿ ಪ್ರಕಟಿತ ಬೆಳಸಲಿಗೆ ಕೃತಿ ಸಂಪುಟ – ೧

**ಹಕ್ಕುಸ್ವಾಮ್ಯ ವಿವರ:**

ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೩೦೨

**ಪಾತ್ರಗಳು:**

ಸುರಥ - ಸುಕೃತಿ, ಸುನೀತ, ನಾರದ, ಯಮಧರ್ಮ, ಸುಹರ್ಷ, ಹರ್ಷ, ಶ್ರೀರಾಮ, ಸುಮಂತ್ರ, ಅಗಸ್ತ್ಯ, ವಸಿಷ್ಠ, ಶತ್ರುಘ್ನ, ಪುಷ್ಕಳ, ಲಕ್ಷ್ಮೀನಿಧಿ, ಆಂಜನೇಯ, ಅಂಗದ, ಜಾಂಬವ, ಸುಗ್ರೀವ, ದುರ್ಮುಖ, ರತ್ನಪ್ರಭೆ, ಮಾಲಿನಿ, ಕರಂಡಕಾಸುರ, ಊರ್ಧ್ವಮುಖಿ, ಸುದರ್ಶನ, ಸುಧನ್ವ, ಸುಪ್ರಭೆ, ದೂತ, ವಿಭೀಷಣ, ಚಾರಕರು, ಕಿರಾತರು, ಯಮದೂತರು, ಸ್ತ್ರೀಯರು ಇತ್ಯಾದಿ

**ಕಥಾ ಸಾರಾಂಶ:**

ಕುಂಡಲಾವತಿಯ ಅರಸ ಸುರಥನು ನಾರದರ ಉಪದೇಶಾನುಸಾರ ಶ್ರೀರಾಮತಾರಕ ಮಂತ್ರವನ್ನು ಜಪಿಸಿ, ತನ್ನ ಪ್ರಜೆಗಳಿಗೂ ಅದನ್ನು ಅನುಷ್ಠಾನಗೊಳಿಸಲು ತಿಳಿಸುವನು. ಇದರಿಂದ ಸಾಯುವವರಿಲ್ಲದೇ ಯಮಧರ್ಮರಾಯನು ಸ್ವತಃ ಬಂದು ನೋಡಲು, ವಿಷ್ಣುಪಾರ್ಷದರ ಮುಖೇನ ಸೋಲುವನು.

ಅಗಸ್ತ್ಯರ ವಚನದಂತೆ ಶ್ರೀರಾಮ ಅಶ್ವಮೇಧವನ್ನು ಕೈಗೊಳ್ಳಲು, ಅದರ ಬೆಂಗಾವಲಿಗೆ ಶತ್ರುಘ್ನ, ಪುಷ್ಕಳ, ಹನೂಮಂತಾದಿಗಳು ತೆರಳುವರು. ಸ್ತ್ರೀರಾಜ್ಯದ ರತ್ನಪ್ರಭೆಯೇ ಮೊದಲಾದವರನ್ನು ಗೆದ್ದ ರಾಮಸೇನೆ, ಕುಂಡಲಾವತಿಗೆ ಬಂದಾಗ, ಸುರಥನು ಶ್ರೀರಾಮದರ್ಶನಾಕಾಂಕ್ಷಿಯಾಗಿ ತುರಗವನ್ನು ಬಂಧಿಸಿ, ಹೋರಾಡಿ ತನ್ನ ಮಕ್ಕಳನ್ನು ಕಳೆದುಕೊಳ್ಳುವನು. ನಂತರ ಸುರಥನು ತನ್ನ ಪರಾಕ್ರಮದಿಂದ ಆಂಜನೇಯಾದಿಗಳನ್ನೇ ಪರಾಭವಗೊಳಿಸಿ ಶ್ರೀರಾಮದರ್ಶನ ಪಡೆದು ಕಪ್ಪವೀಯುವ ಸುಂದರ ಕಥಾನಕ.

**ಕವಿ ಪರಿಚಯ: (ಆಧಾರ: ಗಿಂಡೀಮನೆ ಮೃತ್ಯುಂಜಯ ಮತ್ತು ಕರ್ನಾಟಕ ಯಕ್ಷಗಾನ ಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ಬೆಳಸಲಿಗೆ ಗಣಪತಿ ಹೆಗಡೆಯವರು (೧೯೨೧-೧೯೭೭) ಉತ್ತರ ಕನ್ನಡದ ಸಿದ್ದಾಪುರ ತಾಲೂಕಿನ ಬೆಳಸಲಿಗೆಯವರು. ತಂದೆ ವಿಠ್ಠಪ್ಪ ಹೆಗಡೆ, ತಾಯಿ ಲಕ್ಷ್ಮಮ್ಮ, ಪತ್ನಿ ಕಲಾವತಿ. ಕೃಷಿಕ, ಯಕ್ಷಗಾನ ಕಲಾವಿದ. ಬಾಲ್ಯದಲ್ಲಿ ದೊರಕಿದ ಅಲ್ಪಸ್ವಲ್ಪ ಓದುಬರಹವೇ ಇವರ ವಿದ್ಯಾಭ್ಯಾಸ. ಆದರೆ ಇವರ ಕಾವ್ಯರಚನಾ ಪ್ರೌಢಿಮೆಯು ಪಂಡಿತರೂ ತಲೆದೂಗುವಂತಿದೆ. ಸಮಗ್ರ

ಮಹಾಭಾರತ (ಅರ್ಥಾತ್ ಕುರುಕ್ಷೇತ್ರ) ವು ಇವರ ಮೊದಲ ಕೃತಿ. ಕಾರಣಾಂತರಗಳಿಂದ ಯಕ್ಷಗಾನದ ಕವಿಗಳ ಸಾಲಿನಲ್ಲಿ ಇವರಿಗೆ ಸಿಗಬೇಕಾಗಿದ್ದ ಸ್ಥಾನ ಸಿಕ್ಕಿಲ್ಲವೆಂದು ಕಾಣುತ್ತದೆ.

ಇವರು ಬರೆದ ಪ್ರಸಂಗಗಳು: ಸಮಗ್ರಭಾರತ, ಸಂಪೂರ್ಣ ರಾಮಾಯಣ, ಕೌಂತೇಯ ಕರ್ಣ, ಆಂಜನೇಯ ಪರಾಜಯ, ವಸಂತಸೇನಾ, ಕಲಿಗರ್ವಭಂಗ, ಶ್ರೀಮತೀಪರಿಗ್ರಹ, ಪಾರ್ವತೀ ಆಗ್ರಹ, ಪುತ್ರಬಲಿದಾನ, ತ್ರಿಭುವನ ವಿಜಯ, ಸತೀಸಾಮರ್ಥ್ಯ, ಅಹಲ್ಯೋದ್ಧಾರ, ಇಟಗಿ ಕ್ಷೇತ್ರಮಹಾತ್ಮೆ, ಮಾಯಾ ಮಂದಾರವತಿ, ಗಂಗಾವತರಣ, ಚ್ಯವನ – ಸುಕನ್ಯಾ, ಓಘವತೀ ಪರಿಣಯ, ವಿಕ್ರಮಾದಿತ್ಯ ವಿಜಯ, ಸೀತಾರಾಮ ಪರಂಧಾಮ, ದುಷ್ಯಂತ ಶಾಕುಂತಲಾ, ಮಹಾಸತಿ ಮಂಡೋದರಿ, ಭಾನುತೇಜಸ್ವಿ, ಕನ್ನಡ ಕೇಸರಿ, ಕನ್ಯಾರತ್ನ, ಸೌಭಾಗ್ಯಪ್ರದಾನ

**ಟಿಪ್ಪಣಿ:**

# ಪ್ರಸಂಗ ಸಾಹಿತ್ಯ

**ಭಾಮಿನಿ**
ಕರಿವದನ ವಾಗ್ದೇವಿ ಗುಹ ಸರ |
ಸಿರುಹಭವ ಸಿರಿ ಹರಿಯುಮಾಶಂ |
ಕರರ ಪೊಡಮಟ್ಟಿಂದ್ರ ಮುಖ್ಯಾಮರರ ಕೊಂಡಾಡಿ ||
ಗುರುವಿನಮಲ ಪದಾರವಿಂದವ |
ಸ್ಮರಿಸಿ ಕವಿಗಳ ನುತಿಸಿ ಹಿರಿಯರ |
ಚರಣಕಾನತನಾಗಿ ಚಿನುಮಯ ಚರಿತೆಯಿದನೊರೆವೆ || ೧ || 1 ||

**ಸೌರಾಷ್ಟ್ರ - ತ್ರಿವುಡೆ**
ಮುನಿಪ ವಾತ್ಸ್ಯಾಯನಗೆ ಫಣಿಪತಿ |
ಯನುಪಮಿತ ರಾಮಾಶ್ವಮೇಧವ |
ಸನುಮತದೊಳನುವದಿಸುತಿರೆ ಯತಿ | ಮಣಿದುಸುರ್ದ || ೧ ||

ಹರಿಗೆ ದುರಿತವದೆಲ್ಲಿ ಹನುಮನ |
ಪರಿಭವಿಸಿ ಶತ್ರುಘ್ನ ಮುಖ್ಯರ |
ಸೆರೆವಿಡಿವ ಬಲುಹೆಂತು ಸುರಥಗೆ | ದೊರಕಿತೆಂದು || ೨ ||

ಬಿತ್ತರದಿ ಪೇಳೆನುತ ಮುನಿ ಮಗು |
ಳುತ್ತಮಾಂಗವ ಪದಕಿರಿಸೆ ಪಿಡಿ |
ದೆತ್ತಿ ಬಣ್ಣಿಸುತಿರ್ದ ಫಣಿಪತಿ | ಯುತ್ಸವದೊಳು || ೩ || 4 ||

**ವಾರ್ಧಕ**
ಕೃತಯುಗದಿ ಕುಂಡಲಾವತಿಯೆಂಬ ಪುರವಾಳು |
ತತಿಬಲಾನ್ವಿತ ಸತ್ಯಸಂಧ ಸುರಥಾಹ್ವಯಂ |
ಸತಿ ಮೌಳಿ ಸುಕೃತಿ ಕುಲರತುನರೆನಿಪೀರೈದು ಸುತರುಮಖಿಲೈಶ್ವರ್ಯದಿ ||
ಅತುಲ ವೈಭವದಿಂದ ಸಭೆಯೊಳೊಂದಿವಸ ನೃಪ |
ಮಿತಿಯಿಲ್ಲದಿಹ ಸುಖಕೆ ವ್ಯಥಿಸಿ ಮನದಲಿ ನ್ಯಾಯ |
ಚತುರ ಸೌಜನ್ಯ ಗುಣಯುತ ಸಚಿವನಾಗಿಹ ಸುಮತಿಯ ಕರೆದಿಂತೆಂದನು || ೧ || 5 ||

**ಕಾಂಭೋದಿ - ಝಂಪೆ**
ತೃಪ್ತಿಗಾಣದ ವಿಷಯ ವ್ಯಾಪ್ತಿ ದಿನ ದಿನ ಮರಳಿ |
ವ್ಯಾಪ್ತವಹುದರಿಯೆ ನಿಸ್ಸಾರ ||
ಕ್ಲುಪ್ತ ಶಾಶ್ವತಪದದ ಜ್ಞಪ್ತಿಗೊಡದಡಿಗಡಿಗೆ |
ತಪ್ತವೀ ಮನುಜ ಸಂಸಾರ || ೧ ||

ಸುಗಮವಲ್ಲವು ಜೀವನಿಗೆ ನಿಖಿಲ ಯೋನಿ ಯೋ |
ನಿಗಳನುತ್ತರಿಸುತಂತ್ಯದಲಿ ||
ಮಿಗೆ ಸುಕೃತ ಫಲವೆಂಬೊಲೊಗೆವ ನರ ತನುವಿದರೊ |
ಳಪ್ಪ ಹರನ ಪದವ ಜ್ಞಾನದಲಿ || ೨ ||

ಪೊಂದಬೇಕದನುಳಿದು ಮಂದಮತಿಯಲಿ ವಿಷಯ |
ಬಂಧದಲಿ ಸಿಲುಕಿ ಮರುಕೊಳಿಸಿ ||
ಪಿಂದಣಂದದೆ ಭವದಿ ಬೆಂದು ಬೇಗುದಿಗೊಂಬ |
ನೆಂದು ಸಾರಿಹುದು ಶ್ರುತಿ ತಿಳಿಸಿ || ೩ || 8 ||

**ಭಾಮಿನಿ**
ತಡೆಯು ಪರಕೀ ಭೋಗ ಭಾಗ್ಯದ |
ತೊಡಕನೊಲ್ಲೆನು ಸುತಗೆ ರಾಜ್ಯವ |
ಕೊಡುವೆ ಮೇಲಧಿಕಾರ ನಿನ್ನದು ಬಿಡದೆ ಧರ್ಮದಲಿ ||
ನಡೆಸಿಕೊಂಬುದು ನೀನೆನುತ್ತಿರೆ |
ಜಡಜಪತ್ರಾಂಬಕನ ನಾಮವ |
ನುಡಿವ ಮಹತಿಯ ಪಿಡಿದು ನಾರದನೊಡನೆ ಮೈದೋರ್ದ || ೧ || 9 ||

**ಕೇದಾರಗೌಳ - ಅಷ್ಟ**
ದಿವಿಜ ತಾಪಸನ ಕಂಡವನೀಶನಿದಿರೆದ್ದು |
ತವಕದಿ ವಂದಿಸುತ ||
ಭವದೀಯ ಪಾದಪದ್ಮವ ನೋಡಿ ಧನ್ಯನೆಂ |
ದವಗೆ ನಿವೇದಿಸುತ || ೧ ||

ದಿನಕರ ದ್ಯುತಿಯಿಂದ ಮಿನುಗುವ ಸೌವರ್ಣ |
ಮಣಿಮಯ ಪೀಠದಲಿ ||
ಮುನಿಯನೇರಿಸಿ ಪಾದ ವನಜಕರ್ಚಿಸಿ ತೀರ್ಥ |
ವನು ಪ್ರಮುಖಾಂಗದಲಿ || ೨ ||

ಧರಿಸಿ ದೈನ್ಯದಿ ಮಗುಳೆರಗಿ ಪೇಳಿದ ಜನ್ಮಾಂ |
ತರದ ಮಹಾಪುಣ್ಯದಿ ||
ಚರಣ ದರ್ಶನವಾದುದರುಹಿ ಕಾರಣವನು |
ದ್ಧರಿಪುದು ಕಾರುಣ್ಯದಿ || ೩ ||

ಎನುತ ಮತ್ತೆರಗಿದ ಜನಪನ ಪಿಡಿದೆತ್ತಿ |
ಮುನಿಪನೆಂದನು ನಗುತ ||
ವನಜಭವಾಂಡವ ಕ್ಷಣ ಬಿಡದಲೆದು ಸ |
ಜ್ಜನರ ತಾಪವ ನೀಗುತ || ೪ ||

ಇರುವುದೆಮ್ಮಯ ದಿನಚರಿಯದರಂತೆ ಸಂ |
ಚರಿಸುತರಸ ನಿನ್ನಯ ||
ದರುಶನಗೈದು ಪೋಪರೆ ಬಂದೆ ತವಮುಖ |
ಸೊರಗಿದ ಪರಿಯೇನಯ್ಯ || ೫ || 14 ||

**ಕಲ್ಯಾಣಿ – ರೂಪಕ (ಸಾಂಗತ್ಯ – ರೂಪಕ)**
ಋಷಿಯೆ ಕೇಳ್ ಭೋಗ ಲಾಲಸೆಗಂತ್ಯವಿಲ್ಲದೀ |
ವಿಷಯಕಂಜಿಹುದೆನ್ನ ಮನಸು ||
ರಸೆಯಧಿಕಾರವನೆಸೆದು ಶ್ರೀಹರಿ ಪಾದ |
ಬಿಸಜಪೊಂದುವುದೊಂದೆ ಕನಸು || ೧ ||

ಆಗದಾಗದು ರಾಜ್ಯ ತ್ಯಾಗಕವಧಿಯುಂಟು |
ನೀಗಲೀಗನ್ಯಾಯವಹುದು ||
ಸಾಗಲರಿದು ಸೌಖ್ಯವಾಗಿ ಮೇದಿನಿಯೊರ್ವ |
ಗಾಗಿ ಪ್ರಜರ ಕೊಂದಂತಹುದು || ೨ ||

ಭೋಜ್ಯವಲ್ಲದ ವಸ್ತು ತ್ಯಾಜ್ಯವಲ್ಲವೆ ಸ್ವಾಮಿ |
ರಾಜ್ಯವಾಳುವನೆನ್ನ ಸುತನು ||
ತ್ಯಾಜ್ಯವೇನಿದೆ ಕಷ್ಟ ಭಾಜ್ಯವಾಗುವುದೆಂತು |
ಪೂಜ್ಯ ಪೇಳೆಂದನು ಸುರಥ || ೩ || 17 ||

**ಭಾಮಿನಿ**

ವ್ಯರ್ಥ ಚಿಂತಿಸದಿರು ಪರಮ ಪುರು |
ಷಾರ್ಥವಿದು ಧರೆಯಾಳೆ ಸರ್ವಸ |
ಮರ್ಥನೀನಿರೆ ಪುತ್ರ ತಾನಸಮರ್ಥನೆಳೆಯನಲಾ ||
ಮರ್ತ್ಯಪತಿ ಕೇಳ್ ರಾಜ್ಯ ಸೂತ್ರವ |
ಪೊರ್ತು ನಡೆಸುವ ಹೊಣೆಯು ಹಿರಿದದ |
ರರ್ಥವನು ನಿನಗೊರೆವೆ ಭಾವಿಸು ಚಿತ್ತಶುದ್ಧಿಯಲಿ || ೧ || 18 ||

**ಬೇಗಡೆ - ಅಷ್ಟ**

ಆಳುವರಸನು ಸುಜನ ಸುವ್ರತನು | ಸರ್ವಜ್ಞ ಸದ್ಗುಣ |
ಶೀಲ ಸತ್ಕುಲಭವ ಸುಶಿಕ್ಷಿತನು ||
ಮೇಲೆ ಸೂನೃತ ಸತ್ಯ ಧರ್ಮ ವಿ |
ಶಾಲಮತಿ ನಿಷ್ಪಕ್ಷ ದುರ್ಜನ |
ಕಾಲ ಸಜ್ಜನ ಪಾಲ ರಿಪುಗಜ ||
ಶೂಲನಿರಬೇಕಖಿಲ ಸಬಲನು || ೧ ||

ಅರಸಗೆಣೆಯಪ್ಪನಿತೆ ಗುಣಯುತನು | ನಿರ್ವ್ಯಾಜ ನಿಸ್ಪೃಹ |
ನಿರತ ಸಜ್ಜನನಿರುವಮಾತ್ಯನನು ||
ಬೆರೆದು ಮುಂತಪ್ಪಖಿಲ ಕೆಳ ಚಾ |
ಕರರ ನೇಮಿಸುತರಸುದಂಡವ |
ಧರಿಸಿ ಧರ್ಮಾಧರುಮ ಸೂಕ್ಷ್ಮವ |
ನರಿತು ರಂಜಿಸುತಿಹುದು ಪ್ರಜರನು || ೨ ||

ಹಾದರವು ಡಗ ಲಂಚ ಕೊಲೆ ಸುಲಿಗೆ | ಗೆಳಸುತ್ತ ದುರ್ಜನ |
ರಾದವರ ಮರ್ದಿಸುತ ಪ್ರಜೆಗಳಿಗೆ ||
ಭೇದ ಗೈವಧಿಕಾರಿಗಳ ತುಳಿ |
ದಾದಿ ಧರ್ಮವ ಪೊರೆವಡಜನಿಂ |
ದಾದ ಬಾಹುಜನಲ್ಪನೇ ಮಹ |
ದಾದ ಸಾಕ್ಷಾದ್ವಿಷ್ಣುವವನಿಗೆ || ೩ || 21 ||

**ಭಾಮಿನಿ**
ಆಳುವವನಸಮರ್ಥನಾದರೆ |
ಕೋಳುಗೊಂಬರು ಬಲರು ಧರ್ಮವ |
ಬೀಳುಗಡೆವಧಮನನು ಪ್ರಜೆಗಳು ಕಾಲಗಾಣಿಸುತ ||
ಶೀಲ ಗುಣ ಸಂಪನ್ನನನ್ಯ ನೃ |
ಪಾಲನನು ನಿಯಮಿಪರು ಪಟ್ಟವ |
ಹಾಳುಗೆಡಹಿದಡಾಪ ಹಾನಿಯ ಪೇಳ್ವೆ ಭೂಸತಿಯ || ೧ || 22 ||

**ಮಧುಮಾಧವಿ – ತ್ರಿವುಡೆ**
ಅರಸನೊಳ್ಳಿದ ಪ್ರಬಲನಿರಲೀ |
ಧರೆಯೆ ದಿವವ್ಯತ್ಯಸ್ತವಾದರೆ |
ನರಕ ಬಲವಾನ್ ಪೃಥ್ವಿಯಹುದದ |
ನೊರೆಯಲೇನು || ಪರಿಯನು || ೧ ||

ತಕ್ಕುದಲ್ಲೊಳೆಯಂಗೆ ರಾಜ್ಯವ |
ನಿಕ್ಕುತಲಿ ಸಂಸಾರ ಧರ್ಮವ |
ಮಿಕ್ಕು ನೀನ್ಯೈದಿದರೆ ಕಂಟಕ |
ವಕ್ಕು ಧರೆಗೆ || ಸಾರಿದೆ || ೨ || 24 ||

**ಭಾಮಿನಿ**
ಭೂಲಲಾಮನು ನಮಿಸಿ ಮುನಿಕುಲ |
ಮೌಳಿ ನಿನ್ನಭಿಮತವ ಮೀರೆನು |
ಬೀಳುಗೊಡೆನೊಡೆತನವ ನೀ ದಯಪಾಲಿಸಿನ್ನೊಂದ ||
ಕೀಳು ಮೇಲೆನದಖಿಲ ಮನುಜರ |
ಮೇಳವಿಸಿ ಸದ್ಗತಿಯ ಪಡೆವ ವಿ |
ಶಾಲ ಮಾರ್ಗವದಾವುದೆನಗದ ಪೇಳಿ ಪೊರೆಯೆಂದ || ೧ || 25 ||

**ಕಾಂಭೋದಿ - ಅಷ್ಟ**
ರಾಮಧ್ಯಾನವ ನೇಮದಿಂದ | ಗೈದು |
ಕಾಮನಯ್ಯನ ಪ್ರೇಮದಿಂದ ||
ಆ ಮಹವೈಕುಂಠ | ಧಾಮವ ಪಡೆ ನಿನ್ನ |
ಸೀಮೆಯ ಜನಸಹಿತೀ ಮಂತ್ರ ಬಲದಿಂದ || ೧ ||

ಹೆಂಗಳಂತ್ಯಜರು ಪಂಚಮರು | ಸಹ |
ಕಂಗೊಳಿಪಖಿಲ ಮಾನವರು ||
ಹಿಂಗದೆ ಭಜಿಸೆ ಪಾ | ಪಂಗಳಳಿಸಿ ಗತಿ |
ಯಂಗೊಡಿಸುವ ಸರ್ವೋತ್ತುಂಗ ತಾರಕನಾಮ || ೨ ||

ರಾ ಯೆಂದು ತೆರೆದ ಮಾತ್ರದಲಿ | ಪಾಪ |
ಬಾಯಿಂದ ಹೊರಡುತಂತ್ಯದಲಿ ||
ಮಾ ಯೆಂದು ಸಂಧಿಸೆ | ಕಾಯಪ್ರವೇಶಕು |
ಪಾಯವಿಲ್ಲದೆಯಘ | ಮಾಯವಾಪುದು ತಿಳಿ || ೩ || 28 ||

**ಭಾಮಿನಿ**
ಹರಸಿ ತೆರಳಿದ ಮುನಿಪ ಸುರಥನು |
ಹರಿಯ ಧ್ಯಾನಾನಂದ ವ್ರುತವನು |
ಹರುಷದಿಂ ಕೈಗೊಂಡು ಮಂತ್ರಿಯ ಕರೆದು ನೇಮಿಸಿದ ||
ಧರೆಯಖಿಲ ಜನವ್ರಾತವಿದನಾ |
ಚರಿಪುದುಳಿದರ ಶಿರವರಿವೆನೆ |
ಚ್ಚರಿಸು ವಿಬುಧರು ಹೋಮ ಹವನವ ಕರಿಸದಿಹುದೆಂದು || ೧ || 29 ||

**ಕಂದ**
ಅರಸನ ನೇಮವ ಸಚಿವಂ |
ಧರೆಯಗಲಕೆ ಸಾರಿಸಿದನು ಚರರಿಂದಿದನುಂ ||
ಶಿರಸಾವಹಿಸುತಲಖಿಲರು |
ಹರುಷದಿ ಭಜಿಸುತಲಿರ್ದರು ಉರುಭಕುತಿಯೊಳಂ || ೧ || 30 ||

**ಕಾಂಭೋದಿ - ಝಂಪೆ**
ತಾಮರಸ ನಯನ ನಾ | ಮಾಮೃತವ ಸವಿಯುತಾ |
ಸೀಮೆಯೊಳಗಖಿಲ ನರವ್ರಾತ ||
ಕ್ಷೇಮದಿಂ ವೈಕುಂಠ | ಧಾಮಕೈದು ತಿರ್ದು |
ದಾ ಮಹಾಶೈಮಿನಿಯೊಳತ್ತ || ೧ ||

ವಿತತ ವಿಭವದಿ ವೈವ | ಸ್ವತ ನೋಲಗಂಗೊಟ್ಟು |
ಕ್ಷಿತಿಯ ಜನರ ವಿಚಾರಕಾಗಿ ||
ವ್ಯಥಿಸುತಾತನ ದೂತರತಿ ಜವದಿ ಬಂದೆರಗೆ |
ಖತಿಯೊಳಂತಕ ದಂಡ ತೂಗಿ || ೨ ||

ದೂತರಿರ ನೀವೇತಕೀ ತೆರದೊಳಿಳೆಯ ಜೀ |
ವಾತಿಶಯದೊಳಗೊಂದೂ ತರದೇ ||
ಪೇತುಗರೆ ಪ್ರತಿದಿನದಿ | ಜೋತ ಮುಸುಡಿಲಿ ಬಪ್ಪ |
ರೀತಿಯೇನೆಂದು ನಿಷ್ಠೂರದೆ || ೩ || 33 ||

**ಕೊರವಿ - ಏಕ**
ಸಲಾಮು ಸಲಾಮು ಜೀಯ | ಯಮಧರ್ಮರಾಯ |
ಸಲಾಮು ಸಲಾಮು ಜೀಯ || ಪ ||
ಒಡೆಯ ನಿಮ್ಮಪ್ಪಣೆಯ | ಶಿರದಿ ಪೊತ್ತು |
ಹುಡುಕುತ್ತ ಮನೆಮನೆಯ ||
ನಡೆವೆವು ದಿನತೆರ ಪೊಡವಿಯ ಜೀವರ |
ಗಡಣದೊಳೋರ್ವರ | ತುಡುಕಲ್ಕಾರದೆ |
ಕಡು ದುಮ್ಮಾನದಿ | ಚಡಪಡಿಸುವೆವಾವ್ || ಸಲಾಮು || ೧ ||

ಭೂಲಲಾಮನು ಸುರಥ | ಕುಂಡಲಪುರ |
ವಾಳುತೀರ್ಪನು ನಿರತ ||
ಭೂಲೋಕದ ಜನ | ಜಾಲವವನ ನುಡಿ |
ಪಾಲನೆಯಲಿ ಸಿರಿ | ಲೋಲನ ನಗರವ |
ಲೀಲೆಯೊಳೈದುವ | ರಾಲಿಸು ದಾತ || ಸಲಾಮು || ೨ ||

ರಾಮ ಮಂತ್ರದ ಬಲದಿ | ಅಖಿಲರು ವಿಷ್ಣು |
ಧಾಮಕೈದುವರ್ಥಲದಿ ||
ಹೋಮಹವನವೆನಿ | ಪಾಯಹಕರ್ಮ ನಿರ್ನಾಮವಗೈದಾ ||
ಭೂಮಿಪ ಧ್ಯಾನದ ನೇಮವನಿತ್ತಿಹ | ನಾಮಹಿಯಗಲದಿ || ಸಲಾಮು || ೩ || 36 ||

**ಭಾಮಿನಿ**
ದೂತರಾಡಿದ ನುಡಿಗೆ ಖತಿಯಲಿ |
ಪ್ರೇತಪತಿ ಗುಡುಗುಡಿಸಿ ಪಲ್ಮೊರೆ |
ದೀತತೂಕ್ಷಣ ಬಡಿದು ನೂಕಿರಿ ಪೇತುಗರನೆನುತ ||
ಭೂತಳದ ನರನೊರಜುಗಳ ಬಲು |
ಹೇತರದು ನಾ ಕಾಂಬೆನೆಂದು ಮ |
ಹಾತಿಶಯ ರೌದ್ರದಲಿ ಕರಣಿಕ ವ್ರಾತಕಿಂತೆಂದ || ೧ || 37 ||

**ಕೇದಾರಗೌಳ - ಝಂಪೆ**
ಚಿತ್ರಗುಪ್ತರು ಕೇಳಿರೊ | ಜವದೊಳಪ |
ಮೃತ್ಯುವನು ಬರಹೇಳಿರೋ ||
ಮತ್ತೆಲ್ಲ ರುಜಿನ ವ್ರಾತ | ಬರಲಿ ಕಫ |
ಪಿತ್ತ ಜ್ವರ ಶೀತ ವಾತ || ೧ ||

ಘೋರ ಹಾವಳಿ ಗ್ರಂಥಿಕ | ಸನ್ನಿ ಮಹ |
ಮಾರಿಕಾ ಚಾತುರ್ಥಿಕ ||
ಕ್ರೂರ ಕ್ಷಯಾಪಸ್ಮಾರ | ಪೊರಮಡಲಿ |
ಭೂರಿ ಬಲ ಜತೆಗೆ ಪೂರಾ || ೨ ||

ಎನುತ ಮಹಿಷನನೇರಿದ | ಕುಂಡಲಾ |
ವನಿಯ ಮುತ್ತಲು ನೋಡಿದ ||
ವನಜಲೋಚನ ಪಾರ್ಷದ | ರಡಹಾಯ್ದ |
ರನಕ ಹರ್ಷಸುಹರ್ಷದ || ೩ || 40 ||

**ಭೈರವಿ - ಅಷ್ಟ**
ನಿಲ್ಲು ನಿಲ್ಲೆಲೊ ದಡಿಗ | ತನವೆಲ್ಲ |
ನಿಲ್ಲಿಸುವೆನು ನೋಡೀಗ ||
ಪುಲ್ಲನಾಭನ ಭಕ್ತನಲ್ಲಿ ದ್ವೇಷವ ಗೈವ |
ಖುಲ್ಲನ್ಯಾರೊದರು ಬೇಗ || ೧ ||

ಧರೆಯ ಜೀವಿಗಳಸುವ | ಕೊಂಡೊಯ್ದಿಕ್ಕಿ |
ನರಕದಿ ದಂಡಿಸುವ ||
ಸರುವಧಿಕಾರ ಪೊಂದಿರುವಂತಕನು ನಾ ನೀ |
ನರು ಹ್ಯಾರೆನ್ನಡ್ಡೈಪವ || ೨ ||

ಹರಿಯ ಪಾರ್ಷದ ಹರ್ಷನು | ಸ್ವಾಮಿಯ ನೇಮ |
ವೆರೆದೀ ಹೊಳಲ ಕಾಯ್ವನು ||
ತರಣಿಜನಾದರೇನ್ ಶರಣರ ತುಡುಕಲಿ |
ಕಿರುವಧಿಕಾರವೇನು || ೩ || 43 ||

**ಶಂಕರಾಭರಣ - ಮಟ್ಟೆ**
ಕಾವ ಬಿಂಕವಿರಲಿ ಸನಿಹ | ಸಾವ ಸಮಯ ಬಂತು ಯಮನ ||
ಸೋವ ನೋಡೆನುತ್ತಲೆಸೆದ ಕಾಲಪಾಶವ || ೧ ||

ತಾ ಮುದದಲಿ ಹರ್ಷನದರ | ವಾಮಕರದಿ ಪಿಡಿದ ಲಯದ ||
ಭೀಮನೆನೆ ಕೃತಾಂತನುರಿದುದ್ದಾಮ ದಂಡವ || ೨ ||

ನೆಗಹಿ ಬಡಿಯಲದನು ಹರ್ಷ | ನಗುತ ಬಲದ ಹಸ್ತದಿಂದ ||
ಅಗಡುತನದಿ ಪಿಡಿಯೆ ಗಜರಿ ಖಗಜ ಸತ್ವದಿ || ೩ || 46 ||

**ಭಾಮಿನಿ**
ಸೆಳೆಯುತಿರ್ದನುಮಿತ್ತಲತ್ತಲು |
ಮುಳಿದು ಪಾರ್ಷದ ನೆಳೆಯುತೀರ್ವರು |
ಬಳಲಿದರು ಪಿರಿದಾಗಿ ಕಾಣದೆ ಗೆಲುವನುಭಯತರು ||
ಹೊಳಲ ಪೊಗುವಪಮೃತ್ಯು ಬಳಗವ |
ತುಳಿದು ಹಿಂಗಿಸಿದನು ಸುಹರ್ಷನು |
ತಿಳಿವುತಿದ ಚರರೈದಿ ಪೇಳಿದರಿಳೆಯ ಪಾಲಂಗೆ || ೧ || 47 ||

**ಮುಖಾರಿ - ಏಕ**
ಲಾಲಿಸಬೇಕು ಜೀಯ ನುಡಿಯ | ಸಲಾಮು ಒಡೆಯ |
ಯೇಳಕಾಗಲ್ರೀ ಗಡಿಬಿಡಿಯ || ಪ ||
ಕಾಳನು ನಮ್ಮಲಿ | ದಾಳಿಗೆ ಬರೆ ಸ್ವಿರ್ರೀ |
ಲೋಳನ ಪಾರ್ಸದ | ಕ್ಯಾಳಗಕೊಟ್ವರು || ಲಾಲಿ || ಅ. ಪ. ||
ಬೀಸಲೊಮ್ಮೆಗೆ ಕಾಳ ಪಾಸ | ಸಳದನದ |
ಪಾರ್ಸದೆರ್ ಗೊಳಲಿಯಿರಿಯ ಹರ್ಸ ||
ಬಾಶುರ ದಂಡದಿ | ಗಾಶಿಪೆ ತಾನೆನು |
ತಾಸೂರ್ಲ್ಯಜನಿಡೆ | ರೋಸದಿ ಕೈಯಿ |
ಟ್ವೀಶುಭಟನು ಕ | ಟ್ವಾಶುರದಿಂದೆಳೆ |
ವಾಶಮಯದಿ ಮಯಿ | ಸಾಸನ ಬಿಡದೆ || ಲಾಲಿ || ೧ ||

ಅತ್ತಲೆಳೆವ ಯಮರಾಜ | ಪಾರ್ಸದ ಬಿಡ |
ದಿತ್ತ ಜಗ್ಗುವ ವೊಳ್ಳೇ ಮೋಜ ||
ಪತ್ರ್ಯಕ್ಷದಿ ಕಾಂ | ಬುತ್ತೈವಗಳಿರೆ |
ವೊತ್ತಿಗೆ ತೆರಳಿ ಮ | ವತ್ತರ ಶ್ವಾರಿಯು ||
ಚಿತ್ರಕೆ ಶತ್ಯಾಶತ್ಯಗಳರಿಕೆಯು |
ಮತ್ತವುದೇಳ್ಯೆ | ವೊತ್ತು ಗಳೆಯದೆ || ಲಾಲಿಸು || ೨ || 49 ||

**ವಾರ್ಧಕ**
ಚರರ ನುಡಿಗಾ ಸುರಥ ಧರಣಿಪತಿ ನಸುನಗುತ |
ಜರೆದನೇನು ವಿಚಿತ್ರ ಹರಿಮಾಯೆ ಸರ್ವತ್ರ |
ನರನೊರಜು ನಾನೆಲ್ಲಿ ಹರಿಯ ಪಾರ್ಷದರೆಲ್ಲಿ | ಅರಿಯಲೆಮ ಧರ್ಮನೆಲ್ಲಿ ||
ತೆರಳಿ ನೋಳ್ಪೆನು ಎನುತ ಬರಲಲ್ಲಿ ಮಿಹಿರಸುತ |
ಶರಣ ಹರ್ಷರ್ಭರದಿ ಹುರುಪಡಿಸಿ ಮತ್ಸರದಿ |
ಉರಿಯುಗುಳುತಾರ್ಭಟಿಸಿ ಉರುಳುತೇಳುತ ಮಥಿಸಿ | ಜರೆವುತೆಳೆವುದನೀಕ್ಷಿಸಿ || ೧ || 50 ||

**ಕಾಂಭೋದಿ - ಝಂಪೆ**
ಧಾರಣೀಪತಿ ನೊಂದು | ದೂರದಿಂ ಕೈಮುಗಿದು |
ಸಾರಿ ಶಕ್ತ್ಯಾಯುಧವ ಪಿಡಿದು ||
ಭೂರಿ ದೈನ್ಯದೊಳೆಂದ | ವೈರವೇಕಿನಿತು ದಯೆ |
ದೋರಿ ಸೈರಣೆಯ ತಾಳುವುದು || ೧ ||

ಕಾಯಕವಿದೇನು ಯಮ | ರಾಯ ಹರಿ ಪಾರ್ಷದರು |
ಪ್ರೀಯರನ್ಯೋನ್ಯರುಭಯತರು ||
ಶ್ರೀಯರಸ ನಾಜ್ಞೆಯಂ | ತಾಯತಿಕೆಯಲಿ ನಡೆವ |
ದಾಯಗರು ಬಹುಮಾನಯುತರು || ೨ ||

ಕಲಹವಿದ ಬಿಡಿರೆನುತ | ಸೆಳೆಯಲೀರುವರ ಕೈ |
ಗಳಚಿ ಬರೆ ಕೈದುಗಳ ಕೊಂಡು ||
ತಲೆವಾಗಿ ಪಾರ್ಷದ ನಿ | ಗಿಳೆಯಪತಿ ಜವನಡಿಯೊ |
ಳಿಳುಹಿ ಶಕ್ತಿಯ ನಮಿಸೆ ಕಂಡು || ೩ || 53 ||

**ನವರೋಜು - ಏಕ**
ಗುಣಕೆ ಮೆಚ್ಚಿದೆ ಭೂಪ | ನಿನ |
ಗೆಣೆಯ ಕಾಣೆ ಪ್ರತಾಪ ||
ಸನುಮತವಹ ವರ | ವನು ಕರುಣಿಸುವೆನು |
ಮನದಿರವೆನಗೊರೆ ಮನುಮಥರೂಪ || ೧ ||

ನಾಮ ಮಂತ್ರದ ಬಲದಿ | ಕೊರೆ |
ಯಾ ಮಾತಿಲ್ಲೀಭವದಿ ||
ನೀಮಹಿಮನು ತವ ನೇಮವಲಂಘ್ಯ ಶ್ರೀ |
ರಾಮ ದರ್ಶನ ಮಮ | ಕಾಮನೆ ಜೀವದಿ || ೨ ||

ಮುಂದೆ ರಾಮಾಹ್ವಯದಿ | ಹರಿ |
ಬಂದಪನೆಜ್ಞದ ನೆವದಿ ||
ಸಂದರ್ಶನವಹುದು | ದಂದಿಗು ಯೌವನ |
ದಿಂದಿರು ಸತಿಸುತ | ರೊಂದಿಗೆ ಹರುಷದಿ || ೩ || 56 ||

**ಭಾಮಿನಿ**
ಲೋಕವಾಟದ ರಂಗ ಜೀವಾ |
ನೀಕ ಪಾತ್ರಗಳರಿಯೆ ದ್ವಂದ್ವಾ |
ನೇಕ ಸಚರಾಚರಗಳರಿವ ವಿವೇಕ ಪರಿಣಾಮ ||
ನಾಕ ನರಕವನಂತವಹ ಸಾ |
ಲೋಕ್ಯ ವಿನಿತು ವಿಭಿನ್ನ ವಿಶ್ವವ |
ತಾ ಕುಣಿಪ ಹರಿಯಿಚ್ಛೆಗೆಂದಿಗು ತಾಕದಾತಂಕ || ೧ || 57 ||

**ಕಂದ**
ಇಳೆಯಲಿ ನಡೆದಪ ಕರ್ಮಂ |
ಗಳಿಗಡ್ಡೈಸದೆ ಧ್ಯಾನದಿ ಪರತರ ಪದವಂ ||
ಸಲೆ ಸಾಧಿಸು ನೀನೆನುತಂ |
ಘಳಿಲನೆ ಮೈದೆಗೆದಂ ಬಲ ಸಹಿತಿನಜಂ || ೧ || 58 ||

**ವಾರ್ಧಕ**
ಕಾಲನಾಣತಿಗೊಡಂಬಟ್ಟು ಸುರಥಾಖ್ಯ ಭೂ |
ಪಾಲ ಸೌಖ್ಯದೊಳಿಳೆಯನಾಳುತಿರೆ ಮುಂದೆ ಬಹು |
ಕಾಲಾಂತರದಿ ಭುವಿಯ ಮೊರೆ ಕೇಳಿ ಮಾರಮಣ ಖೂಳ ರಾವಣನ ವಧೆಗೆ ||
ತಾಳಿ ನರರೂಪವನ್ನಿನ ಕುಲಜ ದಶರಥ ನೃ |
ಪಾಲ ಸುತನೆಂದೆನಿಸಿ ರಾಮಾಖ್ಯೆಯಿಂದುದಿಸಿ |
ಶ್ರೀಲತಾಂಗಿಯೆನಿಪ್ಪ ಜಾನಕಿಯ ನೆವದಿ ದೈತ್ಯಾಳಿಯಖಿಲವ ಮರ್ದಿಸಿ || ೧ || 59 ||

**ಭಾಮಿನಿ**
ಸೀತೆಯವರಜನೊಡನಯೋಧ್ಯಾ |
ಧಾತ್ರಿಯನು ಪಾಲಿಸುತಲೋರುವ |
ಧೂರ್ತ ರಜಕನ ನುಡಿಗೆ ತೊರೆದ ಪುನೀತೆ ಜಾನಕಿಯ ||
ಆ ತಳೋದರಿ ಕುವರರನು ಮುನಿ |
ನಾಥ ವಾಲ್ಮೀಕಾಶ್ರಯದಿ ಪಡೆ |
ದಾತಿಶಯ ಸೌಖ್ಯದೊಳಿರಲು ರಘುಜಾತನೊಂದಿವಸ || ೧ || 60 ||

**ಕಾಂಭೋದಿ - ಝಂಪೆ**
ಇತ್ತನೋಲಗ ಸಚಿವ | ಮತ್ತಧಿಕ ಸಾಮಂತ |
ಮೊತ್ತ ಗುರು ಪಂಡಿತೋತ್ಕರದಿ ||
ಮಿತ್ರ ಮನ್ನೆಯ ಸಹಜ | ಪುತ್ರ ಪ್ರಜೆ ಪರಿವಾರ |
ದೊತ್ತಿನಲಿ ಸಾಕೇತ ಪುರದಿ || ೧ ||

ಒಂದು ಕಡೆಯಲಿ ವಾದ್ಯ | ವೃಂದ ನರ್ತನ ಗೀತ |
ಒಂದು ಕಡೆಯಲಿ ವೇದಘೋಷ ||
ಒಂದು ಕಡೆ ರಾಜಾರ್ಥ | ಸಂದಾಯದಣಿಕೆ ಮ |
ತ್ತೊಂದು ಕಡೆ ಪೊಗಳಿಕೆ ವಿಶೇಷ || ೨ ||

ನಡೆದಿರಲು ಸಭೆಯೊಳಗೆ | ಸಡಗರದೊಳುಪಚರಿಸಿ |
ಕಡೆಗಣಿಸದೆಲ್ಲ ತರ ತಮವ ||
ಜಡಜಲೋಚನನೀಯೆ | ತೊಡನಂಗ ಚಿತ್ರಗಳ |
ಒಡಲೊಳವನಿಜೆಯ ನಿರ್ಗಮವ || ೩ || 63 ||

**ಭಾಮಿನಿ**
ನೆನೆದು ಮಿಗೆ ಕುದಿಕುದಿದು ಮೌನದಿ |
ಚಿನುಮಯಾತ್ಮಕನಿರ್ದನನ್ನೆಗೆ |
ಮುನಿಕುಲೇಂದ್ರನಗಸ್ತ್ಯನೈದಿದನಿನನ ತೇಜದಲಿ ||
ಜನಪನೆದ್ದಡಿಗೆರಗಿ ಭಕ್ತಿಯೊ |
ಳನುಪಮನ ಕರತಂದು ದಿವ್ಯಾ |
ಸನವನೇರಿಸಿ ಪುಣ್ಯ ಪದಯುಗವನಜಗಳ ತೊಳೆದು || ೧ || 64 ||

**ಶಂಕರಾಭರಣ - ತ್ರಿವುಡೆ**
ಶಿರದಿ ತೀರ್ಥವ ಧರಿಸಿ ರಾಘವ |
ಕೊರಳ ಬಾಗಿ ನಿಂದಿರೆ ||
ಪರಿಯನೀಕ್ಷಿಸುತೆಂದ ಮುನಿಯ |
ಚ್ಚರಿಯಗೊಳುತ || ೧ ||

ಇಳೆಯ ದೂರನು ಕೇಳಿ ನರನಾ |
ಗಿಳಿದ ಹರಿ ನೀ ಸಮರದೆ ||
ನಳಿನಭವ ಪೌತ್ರಾದಿ ದಾನವ |
ಕುಲವ ತರಿದೆ || ೨ ||

ಕೊಡುವ ಕೊಂಬುವ ನಿಡುವ ಕೊಲ್ಲುವ |
ಒಡೆಯ ನೀನೇ ಸಕಲಕೆ ||
ಪೊಡವಿಗಿತ್ತಿಹೆ ನಲಿವ ನಿನಗೆ ದು |
ಗುಡವಿದೇಕೇ || ३ || 67 ||

**ಭಾಮಿನಿ**
ಅಳುಕಿ ರಘುವರನೆಂದ ದಶಗಳ |
ಜಲಜಸಂಭವ ಕುಲಜನಹುದೇ |
ಖಳನು ತಾನೇಕಾದ ದಾನವ ಬಳಗವೆಂತಾಯ್ತು ||
ಇಳೆಗೆ ಕಂಟಕನಾದನೆಂತದ |
ತಿಳುಹಿಯೆನ್ನಯ ಮನದ ಸಂಶಯ |
ಕಳೆಯಬೇಕೆಂದೆರಗೆ ಮುನಿ ನೃಪತಿಲಕಗೆಂದ || ೧ || 68 ||

**ವಾರ್ಧಕ**
ಧೀರ ಕೇಳ್ ವೈಕುಂಠ ದ್ವಾರಪಾಲಕರವರು |
ಘೋರ ಖಳರಾಗುದಿಸಿ ಮಾರಮಣನಿಂ ಹತಿಸಿ |
ಮೂರು ಜನ್ಮಾಂತರದಿ ಸಾರತರ ಸ್ವಸ್ಥಳಕೆ ಸಾರಬೇಕೆಂಬ ತೆರದಿ ||
ಕ್ರೂರತರ ಶಾಪವನ್ನೋರಂತೆ ಪಡೆಯುತಮ |
ರಾರಿ ವಧು ಕೈಕಸೆಯೊಳಾ ಋಷಿ ಪುಲಸ್ತ್ಯಜ ಕು |
ಮಾರರಾಗುದಿಸಿ ತ್ರೈಧಾರ್ಯೆಗುಬ್ಬಸರೆನಿಸಿ ವೀರ ನಿನ್ನಿಂದಳಿದರು || ೧ || 69 ||

**ಕಂದ**
ಮಾತದು ಹೃದಯಕೆ ವಜ್ರಾ |
ಘಾತಮಾಗೆ ಕುಸಿದಂ ರಘುನಾಥಂ ಬುವಿಯೊಳ್ ||
ಭೀತಿಯೊಳಿರೆ ಸಭೆ ಕೌಸಲೆ |
ಜಾತಂ ಕಂದೆರದೆಂದಂ ಕಾತರಿಸುತ್ತಂ || ೧ || 70 ||

**ಸಾವೇರಿ - ಆದಿ**
ನಿತ್ಯ ಪೂಜಿತರೆಮಗೆ | ವಿಪ್ರರು ಬ್ರಹ್ಮ |
ಹತ್ಯೆ ಬಂದುದೆ ತನಗೆ ||
ಸ್ತುತ್ಯ ಸೂರ್ಯಾನ್ವಯಕೆ | ಮಸುಳಾಯ್ತೆನ್ನಿಂದ |
ಸತ್ಯ ಕ್ಷಾತ್ರಾಹ್ವಯಕೆ || ೧ ||

ದುರುಳನ ಬಂದಿಯಾದ | ಸತಿಯ ಪತಿ |
ಕರಿಸಿದೊಂದಪವಾದ ||
ಪರಿಶುದ್ಧಳನು ತೊರೆದ | ನೆನ್ನುತ ಮತ್ತೆ |
ಧರೆಯೊಳಾಂತೆನು ಬಿರುದ || ೨ ||

ಒಡಲು ಸುಡುವುದೊಳಗೆ | ಲೋಕದ ಕೆಡು |
ನುಡಿ ದಹಿಪುದು ಹೊರಗೆ ||
ತಡೆವುದೆಂತಿದ ಕಡೆಗೆ | ಬರಸಿಡಿಲಾಗಿ |
ಹೊಡೆದ ಹತ್ಯೆಯನು ಮಿಗೆ || ೩ || 73 ||

**ಬೇಗಡೆ - ಅಷ್ಟ**
ಸಾಕು ಸಾಕೀ ಚಿಂತೆ ರಘುನಾಥ | ನಿರ್ಲೇಪ ನಿರ್ಗುಣ |
ಆಕುಲಾಕೃತಿರಹಿತ ವಿಧಿತಾತ ||
ಲೋಕನಾಯಕನೇಕ ನಾಮವ | ನೇಕ ಪಾಪಾನೀಕದುರುಬೆಯ |
ತಾ ಕಳೆವುದೈ ಲೌಕಿಕರ ತೆರ | ನೇಕಳುವೆ ತ್ರಿದಿವೌಕಸಾನತ || ೧ ||

ಮೇದಿನೀಸುತೆಯಗ್ನಿ ಪರಿಪೂತೆ | ನೀ ತೊರೆದಿರುವುದಪ |
ವಾದಕಲ್ಲದು ಕೀರ್ತಿ ಕಾಮುಕತೆ ||
ಬೈದು ಫಲವೇನಾದ ಕಾರ್ಯವ | ದಾದುದಿನ್ನೀ ಖೇದವೇತಕೆ |
ಆದಿಲಕ್ಷ್ಮಿಗೆ ಬಾಧೆಯಿಲ್ಲೈ | ಮೋದದಿಂದಿಹಳಾದರೆಲ್ಲಿಯೊ || ೨ ||

ಆದರೀ ಹತ್ಯೆಯ ನಿವಾರಣಕೆ | ನರನಾದುದಕೆ ಹಯ |
ಮೇಧ ಯಾಗವ ಮಾಡಿ ಮುನಿ ಗಣಕೆ ||
ಸಾದರದಿ ದಾನಾದಿಗಳನಿ | ತ್ತಾದರಿಸು ಮಿಗೆ ಮೋದವಪ್ಪುದು |
ಸಾಧಿಸಿಹರಿದನಾದಿಯಲಿ ಮರು | ತಾದಿ ನಿನ್ನವರಾದ ಭೂಪರು || ಸಾಕು || ೩ || 76 ||

**ಭಾಮಿನಿ**
ಸನುಮತದೊಳಿದ ನಡೆಸು ಬಹೆವೆಂ |
ದೆನುತ ಮುನಿಯಾಶ್ರಮಕೆ ತೆರಳಿದ |
ಜನಪ ಗುರುವಭಿಮತದಿ ಸರಯೂ ತಟದಿ ಶಾಲೆಯನು ||
ಘನತವಕದಲಿ ಗೈದು ವಾರುವ |
ವನು ತರಿಸಿ ಸಂಭಾರ ಸಿದ್ಧತೆ |
ಯನುಕರಿಸಿ ಋಷಿ ರಾಯ ಬಾಂಧವಗಣವ ಮೇಳೈಸಿ || ೧ || 77 ||

**ಸೌರಾಷ್ಟ್ರ - ತ್ರಿವುಡೆ**
ಗುರುವಸಿಷ್ಠರ ಮುಖದಿ ದೀಕ್ಷೆಯ |
ಹರುಷದಿಂ ಕೈಗೊಂಡು ಯಾಗದ |
ತುರಗವನು ಶೃಂಗರಿಸಿ ಪೂಜಿಸಿ | ಸುರುಚಿರದೊಳು || ೧ ||

ಬರೆಸಿ ಬಿರುದಾವಳಿಯ ಪಟವನು |
ಶಿರದಿ ಬಂಧಿಸುತದರ ಕಾಪಿಗೆ |
ತೆರಳು ಬಲ ಸಹಿತೆನುತ ಶತ್ರುಹ | ಗೊರೆದ ನಯದಿ || ೨ ||

ಮಲೆತವರ ಮರ್ದಿಸುತ ಸ್ನೇಹ |
ಕ್ಕೆಳಸುವರ ಮನ್ನಿಸುತ ಮರೆಗೊಂ |
ಡಿಳೆಯರಸನನು ಸಲಹಿ ಪಾಲಿಸು | ಕುಲದ ನಯವ || ೩ ||

ಎನಲು ತನುಪುಳಕದಲಿ ಶತ್ರುಹ |
ಜನಪನಂಘ್ರಿದ್ವಯದಿ ಪಣೆಯಿ |
ಟ್ಟೆನಗೆ ಹರಕೆಯಿದೆಂದನುರುತರ | ವಿನಯದಿಂದ || ೪ ||

ಆನಕ ಹೊಂದಳಿಗೆಯಲಿ ವೀಳ್ಯವ |
ಚಿನುಮಯಾತ್ಮಕ ಪಿಡಿದು ನಿಂದಿರೆ |
ಘನಜವದಿ ಭರತಾತ್ಮಭವ ತಾ | ಮಣಿದು ನುಡಿದ || ೫ || 82 ||

**ಭೈರವಿ - ಆದಿ**
ತಾತ ನೀನವಧರಿಸು | ಜಾತನದೊಂದು |
ಮಾತ ದಯದಿ ಮನ್ನಿಸು ||
ನಾ ತೆರಳುವೆ ಶತ್ರು | ಘಾತನೊಡನೆ ಜೈತ್ರ |
ಯಾತ್ರೆಗೆನ್ನನು ಕಳಿಸು || ೧ ||

ಎಳೆಯನೆಂಬೆಣಿಕೆ ಬೇಡ | ಯದ್ಧಕೆ ವಿಷ |
ಗಳನೊಮ್ಮೆ ಬರಲಿ ನೋಡಾ ||
ಗೆಲಿದು ಸೊಕ್ಕಿದ ಬಲು | ಬಲರ ತುಳಿದು ಕಪ್ಪ |
ಗಳ ಹೊರಿಸುವೆನು ಗಾಢ || ೨ ||

ತವಪಾದಾಂಬುಜ ಕರುಣ | ಶ್ವಶುರನಿತ್ತ |
ಕವಚ ಧನುಷ್ಯತೂಣ ||
ಸವನಿಸಿರಲು ನಿನ್ನ | ಕುವರಗಾವುದು ಗಣ್ಯ |
ತವಕದಿ ಹರಸುಯನ್ನ || ೩ || 85 ||

**ಭಾಮಿನಿ**
ಎಂದು ಪುಷ್ಕಳನೆರಗಲಾನಿಜ |
ಕಂದನನು ತೆಗೆದೆತ್ತಿ ಸೇನಾ |
ವೃಂದದೊಡೆತನದೊಡನೆ ವೀಳ್ಯವ ನಂದನಂಗಿತ್ತು ||
ಚಂದದಿಂದ ಸುಮಂತ್ರ ಜಾಂಬವ |
ನಿಂದ್ರಪೌತ್ರಾನಿಲಜ ಸೌರ್ಯರ |
ನಂದದಿಂ ಮೇಳೈಸಿ ಬೆಂಬಲಕೆಂದು ನೇಮಿಸಿದ || ೧ || 86 ||

**ಮಾರವಿ - ಏಕ**
ತ್ವರಿತದಿ ಶತ್ರುಹನೆರಗುತಲಣ್ಣನ |
ಚರಣಕೆ ಮುದದಿಂದ ||
ವರಸುಮುಹೂರ್ತದಿ ಪೊರಡಿಸಿ ಸೇನಾ |
ಶರಧಿಯ ಜವದಿಂದ || ೧ ||

ನಡೆದನು ವಾಹಿನಿಯಡಿಯ ಝಡಿತಕಿಳೆ |
ನಡುಗಿತು ಕೆಂಧೂಳು ||
ಅಡರಿತಿನನ ಪ್ರಭೆಗೆಡರಾಯ್ತುಕ್ಕಿತು |
ಕಡೆಯಲಿ ಕಡಲೇಳು || ೨ ||

ಮೂಡಣ ನೃಪರ ವಿಭಾಡಿಸಿ ಕಪ್ಪವ |
ಜೋಡಿಸುತುತ್ಸಹದಿ ||
ಕೂಡಲೆ ತೆಂಕಣನಾಡ ಪ್ರವೇಶವ |
ಮಾಡಿದನತಿ ಜವದಿ || ೩ || 89 ||

**ಭಾಮಿನಿ**
ಮಲೆತ ರಾಯರ ಗೆಲಿದು ಶತ್ರುಹ |
ಬಲಸಹಿತ ಮುನ್ನಡೆಯೆ ಕಂಟಕ |
ಹಳುವಕೈದಿತು ತುರಗವಾವನವಳಯಪತಿಯಾದ ||
ಖಳನು ದುರ್ಮುಖನೆನಿಪ ವ್ಯಾಧನು |
ಚಳಕದಿಂ ಮಿಗೆ ಬೇಟೆಯಾಡುತ |
ಬಳಗಸಹ ಬಹನೀಕ್ಷಿಸಿದನೀ ಹೊಳೆವ ತೇಜಿಯನು || ೧ || 90 ||

**ಖಮಾಚ್ - ಏಕ**
ಅರೆರ್ಯೇ ಏನಾತ್ಯಂ | ಬರಮ ಕೆಂಚ |
ದುರಗ ಕರಿಯ | ವೋಬಣ್ಣ ||
ಅರಿಯಲ್ ಚೋಜಿಗ | ಬರುವಾಕುದ್ರೆಯ |
ಮಿರಿ ಮಿರಿ ಮಿಂಚುವ | ಮೈಬಣ್ಣ || ೧ ||

ಕಣ್ಣಿಗೆ ಚೌಬೇಸ್ | ಯೊಣ್ಣುಂಗೈತೆ |
ಶಿನ್ನದ ಯೇರ್ | ಮೈತುಂಬ ||
ಮಿಣ್ಣನೆ ಒಯ್ದದ | ಶನ್ನಿಗೆ ಕೊಡಲೀ |
ದಿಣ್ಣನವೊಗಳ್ಯಾಳ್ | ಬಾಯ್ತುಂಬ || ೨ ||

ಗಡನಿದಯಿಡ್ಕೋ | ಗುಡಿಸಲಿಗೊಡ್ಕೋ |
ವುಡುಗಶಿಪಾಯ್ರುಗ | ದುರುದುಂಡ ||
ನೆಡಿ ಬೆನ್ಹತ್ತು | ಪಡೆಗೊಳುವತ್ತು |
ಮಡಗಲಿ ವೊಡೆದೀ | ಮಿಗದಿಂಡ || ೩ || 93 ||

**ಭಾಮಿನಿ**
ಒಡೆಯನಾಜ್ಞೆಗೆ ಶಬರರಶ್ವವ |
ಪಿಡಿದು ಸಾಗುತಲಿರಲು ಕಾಣುತ |
ಲೊಡನವರನಡಗಟ್ಟಿ ಕೆಡೆದರು ಕಡಿದು ರಾವುತರು ||
ಪಡೆಯಳಿಯೆ ಕಿಡಿಗೆದರಿ ದುರ್ಮುಖ |
ಗುಡುಗುಡಿಸುತಿದಿರಾದನೀಕ್ಷಿಸಿ |
ತಡೆದು ಗರ್ಜಿಸುತಿಂದ್ರುನಂದನನೊಡಲ ಭವನೆಂದ || ೧ || 94 ||

**ಮಾರವಿ - ಏಕ**
ಯಾರೊ ಕಿರಾತನೆ | ಶ್ರೀರಾಮನ ಮಖ |
ವಾರುವವನು ತಡೆದು ||
ಸಾರದಿರೆಲೊ ಯಮ | ನೂರಿಗೆ ಶತ್ರುಹ |
ವೀರಗೆ ಶರಣಹುದು || ೧ ||

ಎಲ್ಲಿಯ ರಾಮ್ಯಾ | ಯಲ್ಲಿಯ ಸತ್ರುವ |
ಯಲ್ಲಿಯ ನೀನ್ಯಾರ್ ಮ್ಯಾಂ ||
ಬಲ್ಯದ ದುರುಮುಗ | ಗೆಲ್ಯಾರೆನ್ನೈನಾ |
ಕೊಲ್ಲುವೆ | ಸರಣಾಗ್ ಬಾ ಮ್ಯಾಂ || ೨ ||

ಕೋಣಗೆ ಕಿನ್ನರಿ | ಗಾನವೆ ತಡೆ ಕಡೆ |
ಗಾಣಿಪೆನೆಂದೆನುತ ||
ತ್ರಾಣದೊಳೆತ್ತಿ ಕೃ | ಪಾಣದೊಳಿಡಲಿಳೆ |
ಗಾನಿದ ಕೈರಾತ || ೩ || 97 ||

**ಕಂದ**
ತೆರಳಿತು ಮುಖಹಯ ಕೇರಳ |
ಧರೆ ಸ್ತ್ರೀರಾಜ್ಯದ ಕನ್ಯಕಪುರಕಂ ಮಿದನುಂ ||
ಪರಿಕಿಸಿ ಕಾವಲ ತರುಣಿಯ |
ರೆರಗುತ ರತ್ನಪ್ರಭೆಯೆಂಬರಸಿಗೆ ನುಡಿದರ್ || ೧ || 98 ||

**ಸಾರಂಗ - ಅಷ್ಟ**
ಲಾಲಿಸು ದಯದಿ ರಾಣಿ | ನಾವೆಂಬುದು |
ಜಾಲವಲ್ಲಿದು ಕಲ್ಯಾಣಿ || ಪ ||
ಭಾಳದಿ ಪಟವಿಹ | ಮೇಲಾದೊಂದ್ಹಯವಿಲ್ಲಿ |
ಕಾಲಿರಿಸಿಹುದು ಕಾಣಿ ಅಮ್ಮಣ್ಣಿ || ಅ.ಪ. ||
ಒಂದೆ ಕಿವಿಯು ಬಾಲವು | ಹಳದಿ ಮುಖ |
ಕೆಂದು ಗೊರಸು ನೀಲವು ||
ಗಂಧಲೇಪನಜಲ | ದಂದದ ಕಾಯ ಮೇ |
ಣೊಂದಿದೆ ದ್ವಾತ್ರಿಂಶತಿ | ಲಕ್ಷಣಯುತಿ || ೧ ||

ಚರೆಯರಿಂತೆನಲು ಕೇಳಿ | ಧಿಮ್ಮನೆದ್ದು |
ಭರಿತದಚ್ಚರಿಯ ತಾಳಿ ||
ಅರರೆ ತಾನದರ ಕಂ | ಡರಿವೆನೆಂದೆನುತಲಿ |
ತರುಣಿರನ್ನೆಯರ ಮೌಳಿ | ತಾ ತೆರಳಿ || ೨ ||

ಆ ಕುದುರೆಯ ನೋಡುತ | ನೆತ್ತಿಯ ಸ್ವರ್ಣ |
ಲೇಖವ ತೆಗೆದೋದುತ ||
ಸಾಕೇತಪತಿಯಂತೆ | ಏಕೈಕ ಬಲನಂತೆ |
ತಾ ಕಾಪಿಗಿದರ ಪಿಂತೆ || ಶತ್ರುಹನಂತೆ || ೩ ||

ಧಿರುರೆ ಕಾಂಬೆನು ಸತ್ವವ | ವಿಕ್ರಮವ ನಾ |
ಮೆರೆವೆ ಬಂಧಿಸಿರಶ್ವವ ||
ತರುಣಿಯರನು ಮಿಕ್ಕ | ಪುರುಷರೆಂಬುವ ಸೊಕ್ಕ |
ಮುರಿವೆನೀಕ್ಷಿಸಲಿ ಲೋಕ | ಆ ಬಳಿಕ || ೪ || 102 ||

**ಭಾಮಿನಿ**
ಎನುತ ಸೇನಾಧ್ಯಕ್ಷೆಯಹ ಮಾ |
ಲಿನಿಗೆ ನೇಮಿಸಿದಳು ಚತುರ್ಬಲ |
ವನು ಜವದಿ ಪೊರಮಡಿಸು ಬಂತರಿ ಜನಪತಿಯ ದಂಡು ||
ಹನನಕೆದ್ದೀಳೆನುತ ರಥವೇ |
ರ್ದ್ವನಿಧಿ ಘೋಷದಿ ಪೊರಟಳತ್ತಲು |
ಇನಕುಲೇಂದ್ರಾನುಜಗೆ ಚಾರರು ಮಣಿದೊರೆದರಿಂತು || ೧ || 103 ||

**ಕೊರವಿ - ಅಷ್ಟ**
ಕೇಳಯ್ಯ ರಘುವರಿಯ | ಶತ್ರುಹರಾಯ |
ಪೇಳುವೆವಚ್ಚರಿಯ || ಪ ||
ಒರೆವುದಿನ್ನೇನು ಜೀಯ || ಕಂಡೋರುವೆ |
ತರುಣಿ ಮುಖದ ವಾಜಿಯ ||
ತ್ವರಿತದಿ ಬಂಧಿಸಿ | ಧುರಕಬಲಾಬಲ |
ವೆರೆದು ಬಂದಳು ಹೇಳ | ಲರಿದಾ ಧಿಮಾಕಿಯ || ೧ ||

ಗಂಡುದ್ವೇಷಿಣಿಯಿವಳು | ಸೈನಿಕ ದೇವ |
ರ್ದಿಂಡರೆಲ್ಲವು ಹೆಂಗಳು ||
ಕಂಡಿಲ್ಲಿಂತ ಹರ ಚಾ | ಮುಂಡಿಯ ಸೇವಿಪ |
ದಿಂಡೆಯರಿವದಿರ | ದಂಡಿಸಲೇಳೇಳು || ಕೇಳಯ್ಯ || ೨ || 105 ||

**ಭಾಮಿನಿ**
ದೂತರಾಡಿದ ನುಡಿಯ ಕೇಳುತ |
ಖಾತಿಯಿಂ ಕಿಡಿಯುಗುಳಿ ಶತ್ರುಹ |
ನಾತುರದಿ ಕರೆದೆಂದ ಸೇನಾನಾಥ ಪುಷ್ಕಳಗೆ ||
ಈ ತತೂಕ್ಷಣ ಸಮರಕೆಮ್ಮಯ |
ಚಾತುರಂಗವ ಬಲಿದು ಕ್ರೌಂಚಮ |
ಹಾತಿಶಯದಾಕೃತಿಯ ವ್ಯೂಹವ ಜಾತ ರಚಿಸೆಂದು || ೧ || 106 ||

**ಮಾರವಿ - ಏಕ**
ಎಂದೆನಲಾ ಕಿರಿ | ತಂದೆಯ ಚರಣಕೆ |
ವಂದಿಸಿ ಪುಷ್ಕಳನು ||
ಚಂದದಿ ಧನುಶರ | ದೊಂದಿಗೆ ತ್ವರಿತದಿ |
ಪೊಂದೇರಡರಿದನು || ೧ ||

ಬಲಿಯುತ ಕೋಟೆಯ | ಬಿಲು ಠೇಂಕರಿಸಿದ |
ಮೊಳಗಿತು ರಣಭೇರಿ ||
ಜಲಜಭವಾಂಡಗಳಲುಗುವೊಲಬಲಾ |
ಬಲವೈತರೆ ಮೀರಿ || ೨ ||

ಮೀನಾಂಕನ ಪೊಸ ಸಾಣೆಗಳೆನೆ ಬಹ |
ಮಾನಿನಿಯರ ಕಂಡು ||
ಙ್ಞಾನವಳಿದು ಬಲ | ಗೋಣಲುಗಿತು ಭರ |
ತಾಣುಗ ಮುಂಕೊಂಡು || ೩ || 109 ||

**ಭಾಮಿನಿ**
ಬಲುಭಟರಿಗೀ ಮರುಳೆ ಧರ್ಮವ |
ನಲಘುತರ ಪೌರುಷವನುಳಿದೀ |
ಥಳುಕಿನನ್ಯಾಂಗನೆಯರೆಳೆತಕೆ ಸಿಲುಕಲಿಹ ಪರವು ||
ಮಲಿನವಹುದೆದ್ದೇಳಿ ಮೋಹವ |
ತುಳಿದು ಮಿಗೆ ಕರ್ತವ್ಯ ಮಾರ್ಗವ |
ತಿಳಿದು ಮುನ್ನಡೆಯಿರಿ ವೃಥಾ ಹೊಲೆಗೆಲಸ ಬೇಡೆಂದ || ೧ || 110 ||

**ಶಂಕರಾಭರಣ - ತ್ರಿವುಡೆ**
ನುಡಿಗೆ ಮೈ ತಿಳಿದೊಡನೆ ಪಟುಭಟ |
ಗಡಣ ಧನುವ ನೊದರಿಸಿ ||
ತುಡುಕುತಿರೆ ಕೈದುಗಳ ಪೆಣ್ಬಲ | ದೊಡತಿ ಶರವ ||
ಕಡೆಯ ಕಲ್ಪದ ಕಡಲ ತೆರೆಯನೆ |
ಝುಡಿಯುತಿರಲು ಭರತಜ ||
ತಡೆದು ನೀನಾರ್ಸಾರು ಕಳುಹಿಪು | ದೊಡತಿಗೆಂದ || ೧ ||

ಭಯವೆ ನಾ ಸೇನಾನಿ ಮಾಲಿನಿ |
ಜಯಿಸಿ ನಿಮ್ಮ ತೆರಳ್ವೆನು ||
ಹಯವ ಕಟ್ಟಿದಳಾಣ್ಮ ರತ್ನಾ | ಹ್ವಯಳು ಛಲದಿ || ೨ || 112 ||

**ಘಂಟಾರವ - ಅಷ್ಟ**
ಕಡುಹು ಹೆಂಗಳ ದಡುಗೆ ಸಜ್ಜೆಗಳಲ್ಲಿ ||
ನಡೆಯದೀರಣ | ಕಣದಿ ಶಾಕಿಸಿ |
ಗಡಣಕಿತ್ತಪೆನಡಗನು || ೧ ||

ಪೋಕಮಾತುಗಳೇಕೆ ನಿನ್ನಂತರ ||
ನೇಕರೆಮ್ಮಯ | ಪಾಕಶಾಲೆಯ |
ಚಾಕರಿಯೊಳಿರ್ಪರು || ೨ ||

ಜತೆಯ ಮಾಳ್ಪೆ ನಾ ನತದೃಷ್ಟರಿಂಗೆನು |
ತತಿಶಯದ ಶರ ತತಿಯನೆಸಲದ |
ಹತಿಸಿ ಪುಷ್ಕರ ರೋಷದಿ || ೩ || 115 ||

**ಭಾಮಿನಿ**
ಕುದಿದು ದಿವ್ಯಾಸ್ತ್ರಗಳ ಸುರಿಸಿದ |
ನದುಭುತವನೇನೆಂಬೆ ರಿಪುರಥ |
ಕುದುರೆ ಸಹಿತಿಳೆಗುರುಳಿದದು ಮತ್ತದಕೆ ಮಾಲಿನಿಯು ||
ಕದನದಲಿ ಕೈಸೋತಳೆಂದೆನು |
ವುದನು ರತ್ನಪ್ರಭೆಯು ಕಂಡ |
ತ್ಯಧಿಕರೋಷದಿ ತೆರಳಿ ತಡೆದುಸುರಿದಳು ಪುಷ್ಕಳಗೆ || ೧ || 116 ||

**ಭೈರವಿ - ಅಷ್ಟ**
ಯಾರೆಲೊ ದುರುಳ ನೀನು | ಸುಮ್ಮನೆ ಹಿಂದೆ |
ಸಾರು ಸಾರಿದೆನು ನಾನು ||
ಈ ರಾಜ್ಯದೊಲ್ಲಭೆ | ಧೀರೆ ರತ್ನಪ್ರಭೆ |
ತೋರುವೆನೆಮನೂರನು || ೧ ||

ಮಾನಿನಿ ಮಣಿ ಹಯವ | ಒಪ್ಪಿಸದಿರೆ |
ಜಾಣೆಪೊಂದುವೆ ಲಯವ ||
ಭಾನುವಂಶಜ ಭರತಾಣುಗ ಸೇನಾನಿ |
ನಾನೆ ಪುಷ್ಕಳನೆಂಬವ || ೨ ||

ಓಹೊ ಪುಷ್ಕಳನೆ ನೀನು | ಎಲ್ಲವ ನುಂಗ |
ಲಾಹ ಪುಷ್ಕರಿಣಿ ನಾನು ||
ಕಾಹುರ ಮುಖಕೆ ಪೂರ್ಣಾಹುತಿಯಹೆ ನಿನ್ನ |
ಸಾಹಸ ನಿಲಿಸುವೆನು || ೩ ||

ಹೆಣ್ಣು ನೀನಾಗಿರುವೆ | ಸೊಕ್ಕಿಲಿ ಗಂಡು |
ಗಣ್ಯರೊಡನೆ ಹೋರುವೆ ||
ಮಣ್ಣ ತಿನಿಸುವೆ ಮುಕ್ಕಣ್ಣಗಂಜೆನು ಹಗೆ |
ಯನ್ನು ನೀ ಬಿಡು ಸಾರುವೆ || ೪ ||

ಬಿಡೆನು ಸಾಮದಿ ಹಯವ | ಯದ್ಧದಿ ನಿನ್ನ |
ಪಿಡಿದೊಯ್ದೆನ್ನಾಲಯವ ||
ಗುಡಿಸ ಹಚ್ಚುವೆ ನೋಡು | ಕಡುಹನೆನುತಲೌಡು |
ಗಡಿಯುತೆಚ್ಚಳು ಶರವ || ೫ || 121 ||

**ಭಾಮಿನಿ**
ಬರುವ ಶರಗಳ ಮುರಿದು ಪುಷ್ಕಳ |
ನುರುತರದ ದಿವ್ಯಾಸ್ತ್ರ ವೃಷ್ಟಿಯ |
ಸುರಿಸಲದ ಪುಡಿಗೈದು ಮಾನಿನಿ ಕೆರಳಿ ಕಿಡಿಯಿಡುತ ||
ಕರದ ಚಾಪವ ಕಸಿದು ಪೌರುಷ |
ಮೆರೆವುದಿನ್ನೆನುತಿರಲು ಕಾಣುತ |
ಭರತನವರಜ ತಡದು ಕ್ಷಮೆಯನು ಕರಿಸುತಿಂತೆಂದ || ೧ || 122 ||

**ಪಂತುವರಾಳಿ - ಅಷ್ಟ**
ತರಳೆ ಈ ಪರಿ ತಪ್ಪಿ ನಡೆವರೆ | ರಘು |
ವರನ ವಾಜಿಯ ಕಟ್ಟಿ ತಡೆವರೆ || ಪ ||
ಲಲನೆ ಒಪ್ಪಿಸು ಕಪ್ಪ ಸಹಿತಾಗಿ | ನಿನ್ನ |
ತಲೆಗಾಯ್ವೆ ಶತ್ರುಹ ಲೇಸಾಗಿ ||
ಕೊಳುಗುಳಕೆಮ್ಮೊಳು ಮಾರಾರಿ | ನಿಲ |
ಲಳುಕೆವು ಮರುಳಾಟ ಬಿಡು ನಾರಿ || ೧ ||

ಮೂಲೋಕವಂದ್ಯನು ಶ್ರೀರಾಮ | ಶಿಷ್ಟ |
ಪಾಲಕ ಮೇಣ್ ದುಷ್ಟ ನಿರ್ನಾಮ ||
ಬಾಳಲರಿದು ಹಗೆಗೈದೆಮ್ಮ | ಈ |
ಖೂಳತನವ ತೆಗೆಯಿದು ನೇಮ || ೨ ||

ನಾರಿಹತ್ಯೆಯ ಗಯ್ಯೆ ಮನಸೊಲ್ಲ | ದಿಂತು |
ಸಾರಿದೆ ಸಮರಕಂಜಿದುದಲ್ಲ ||
ಮೀರಿದರೆನಗೆ ಪಾತಕವಿಲ್ಲ | ಯಮ |
ನೂರ ಸೇರಿಪೆ ಹಿಡಿಹಿಡಿಬಿಲ್ಲ || ೩ || 125 ||

**ಸುರುಟಿ - ಏಕ**
ಗಳಹದಿರೆಲೊ ಜನ್ನ | ಕುದುರೆಯ |
ಕಲಹದಿ ಗೆಲಿದೆನ್ನ ||
ಕೊಳಲಾಗದ ಬಾಯುಲುಹಿದು ಶತ್ರುಹ |
ತಿಳಿದೆನು ನಾ ನಿನ್ನ || ೧ ||

ಬಲ್ಲೆನು ರಾಘವನ | ಸುವ್ರತೆ |
ನಲ್ಲೆಯ ತೊರೆದವನ ||
ಖುಲ್ಲನನುಜ ನಿನ | ಗೆಲ್ಲಿಯ ಹೆಂಗೊಲೆ |
ಸೊಲ್ಲಿಸು ಮಗುಳುದ | ರಲ್ಲಿ ಮರಣಕಣ || ೨ ||

ಕಲಹ ಕೊದಗಿನಿಂದ | ಕ್ಷತ್ರಿಯ |
ಬಿಲುವಿಡಿದೈತಂದ ||
ಅಳವಿಗರ್ಯಾರನು | ಕೊಲಬಹುದಿದಿರಪ |
ಕಲಿತನವಿರೆ ಕೈ | ಕೊಳು ಶರವೃಂದ || ೩ || 128 ||

**ಸೌರಾಷ್ಟ್ರ - ತ್ರಿವುಡೆ**
ಕಡುಗಿ ಕೆಂಗಡಿಯುಗುಳಿ ಶತ್ರುಹ |
ನುಡಿದನಿದು ಕೆಡುಗಾಲ ಚಾಪವ ||
ತುಡುಕು ದೋಷಗಳಿಲ್ಲ ದುಷ್ಟೆಯ | ಮಡುಹಲಿನ್ನು || ೧ ||

ಎನುತ ಭಾರಿಯ ಬಾನವೃಷ್ಟಿಯ |
ಕ್ಷಣದಿ ಸುರಿಸಿದನೊಡನೆ ಕಡಿದದ |
ಕಣುಗಳಲಿ ಕಿಡಿ ಸೂಸುತೆಂದಳು | ವನಜನೇತ್ರೆ || ೨ ||

ಕರೆಸಿಕೋ ಪುರಹರನ ಬ್ರಹ್ಮನ |
ಬರಿಸು ಬಲಕೆಂದೆನುತ ಚಾಪಕೆ ||
ತ್ವರಿತದಲಿ ಶಾಂಭವಿಯ ಶಕ್ತಿಯ | ನಿರಿಸಲಾಗ || ೩ || 131 ||

**ಭಾಮಿನಿ**
ಕೇಳು ರತ್ನಪ್ರಭೆಯೆ ಬಲು ದೈ |
ತ್ಯಾಳಿಯನು ಸಂಹರಿಸೆ ದೇಹವ |
ತಾಳಿದಚ್ಯುತ ರಾಮನಲಿ ಹಗೆ ಶೀಲವಲ್ಲವತಿ ||
ಕಾಳಗದಿ ಜಯವಿಲ್ಲ ಸ್ನೇಹದಿ |
ಪಾಳಯವ ಮನ್ನಿನುವುದೆನುತಲಿ |
ಸೂಳಯಿಸಿತಾಕಾಶವಾಣಿಯು ಪೇಳಲೇನದನು || ೧ || 132 ||

**ಕಾಂಭೋದಿ - ಝಂಪೆ**
ಅಶರೀರ ವಾಕ್ಯವದ | ಬಿಸಜಲೋಚನೆ ಕೇಳಿ |
ವ್ಯಸನದಿಂ ಶರ ಚಾಪವಿಳುಹಿ ||
ಕುಸಿದೆಂದಳಬಲೆ ಯೋ | ಚಿಸದೆ ಪೂರ್ವಾಪರವ |
ಜಸವಳಿದುದಕಟ ಗಳಹಿದೆನು || ೧ ||

ಆ ಕೆಟ್ಟ ಹಯವಿಲ್ಲ | ಗೇಕೆ ತಾನೈತಂದು |
ದೇಕೆ ಕಟ್ಟಿದೆ ದುಡುಕಿ ನಾನು ||
ಕಾಕುತನವಾಯ್ತೆನುತ | ವ್ಯಾಕುಲದೊಳಿರೆ ಶತ್ರು |
ಹಾಖ್ಯ ಸಂತೈಸುತುಸುರಿದನು || ೨ ||

ಚಂದಿರಾನನೆ ಲೋಕ | ದ್ವಂದ್ವಮಯ ಹೆಣ್ ಗಂಡು |
ಒಂದು ಮತ್ತೊಂದರಂಗವಲೆ ||
ಸಂದ ಕರ್ತವ್ಯ ಬೇ | ರೆಂದಿದೆಯತಿಕ್ರಮಣ |
ಹೊಂದಲಪರಾಧ ಕೇಳಬಲೆ || ೩ ||

ಕನ್ನೆ ನೀನಧಿರಾಣಿ | ಯೆನ್ನಿಸುತ ತಾಯಾಗ |
ದೆಣ್ಣುತಿಹೆ ಕೇಡ ಸ್ತ್ರೀ ಕುಲಕೆ ||
ಗಣ್ಯರಾಚರಣೆ ಸಾ | ಮಾನ್ಯರನುಕರಣೆ ಯಾ |
ಗನ್ಯಾಯವಹುದಿಳಾ ತಲಕೆ || ೪ ||

ಈ ದೋಷ ಪರಿಹಾರ | ವಾದಪುದು ರಾಘವನ |
ಪಾದವನು ನೋಡು ಬಾ ಮಖಕೆ ||
ಕಾದಿದುದು ಕರ್ತವ್ಯ | ಖೇದವೇಕದಕೆ ಬಿಡು |
ಮೋದದಿಂ ಹಯವ ಸಾಂಪ್ರತಕೆ || ೫ || 137 ||

**ವಾರ್ಧಕ**
ಎಂಬ ನುಡಿ ಕೇಳಿ ಮನ ತುಂಬಿ ಬರೆ ಬಳಿಕಾ ನಿ |
ತಂಬಿನಿಯು ಪುರದಿಂದ ಮಖತುರಗ ಕಾಣಿಕೆಗ |
ಳಂ ಬರಿಸಿ ವಿನಯದಿಂ ಶತ್ರುಹನ ಪದಕಿರಿಸಿ ಕಂಬನಿಯೊಳೈದೆ ನಮಿಸಿ ||
ಎಂಬುದೇನಜ್ಞಾನದಿಂ ದುಡುಕಿದೆನು ಕೂರ್ಮೆ |
ಯೆಂಬು ನಿಧಿ ತವ ಜಾತೆಯೆಂಬೆಣಿಕೆಯಲಿ ಮನ್ನಿ |
ಸೆಂಬಬಲೆಯಂ ದಯದಿ ಸಂತೈಸಿ ಪೊರಮಟ್ಟ ನಂಬುಜಾಕ್ಷಾವರಜನು || ೧ || 138 ||

**ಕೇದಾರಗೌಳ - ಝಂಪೆ**
ದಂಡು ನಡೆದು ಮಖ ಹಯ | ಪೊಗಲು ಮುಂ |
ಕೊಂಡು ಡಿಂಡೀರಟವಿಯ ||
ಅಂಡಲೆಯುತಿಹನೋರುವ | ಕಂಡನು ಕ |
ರಂಡಕನೆನುವ ದಾನವ || ೧ ||

ಅರರೆ ತುರಗವದಾವುದು | ನಾಸಿಕವ |
ಬಿರಿವ ನರವಾಸನೆಯಿದು ||
ಹರನು ಕರುಣದೊಳಿತ್ತುದು | ಪಾರಣೆಯ |
ವಿರಚಿಸುವೆನೆನುತ ನಲಿದು || ೨ ||

ಕ್ಷಣದೊಳೆಳೆದು ಹಯವ | ಓದುತಲಿ |
ಪಣೆಯ ಪಟ್ಟಿಯ ಲಿಖಿತವ ||
ಕಣುಗಳಲಿಳಿಸಿ ಕೆಂಡವ | ಇವನೆ ಎ |
ನ್ನನುಜ ಲವಣನ ಕೊಂದವ || ೩ ||

ಸಿಕ್ಕಿದನು ಕೊಂದಿಕ್ಕುತ | ಮಿದು ಮಾಂಸ |
ಮುಕ್ಕಿ ನಲಿಯುವೆನೆನ್ನುತ ||
ಒಕ್ಕಣಿಸುತುರಿಯುಕ್ಕುತ | ವಾರುವಕೆ |
ರಕ್ಕಸರ ಕಾಪಿಕ್ಕುತ || ೪ ||

ಮೃತ್ಯುವಂತುಲಿದೇಳುತ | ರಿಪುಬಲವ |
ತುತ್ತುಗೈದನು ಕೊಲ್ಲುತ ||
ಶತ್ರುಹನ ಬಲವೋಡುತ | ಲಿರಲಾ ಮ |
ರುತ್ತನೆಯ ತಡೆಯೆ ದೈತ್ಯ || ೫ || 143 ||

**ಶಂಕರಾಭರಣ - ಮಟ್ಟೆ**
ಯಾರು ಕಪಿಯೆ ತೊಲಗು ಎಮ್ಮ | ಪಾರುಪತ್ಯ ಬೇಡ ನಿಮ್ಮ ||
ಧಾರುಣೀಶನೆಲ್ಲಿ ಮೊದಲು ತೋರಿಸೆಂದನು || ೧ ||

ಧಾರಿಣೀಶನ್ಯಾಕೆ ಯಮನ | ತೋರಿಸುವೆನು ಹನುಮನೆನುತ ||
ಭಾರಿ ಶಿಲೆಯೊಳಿಟ್ಟನಾ ಸ | ಮೀರ ತನಯನು || ೨ ||

ದೃಢದ ಹಸ್ತದಿಂದಲಸುರ | ಪಿಡಿದು ತಿರುಗಿ ಬಡಿಯೆ ಹನುಮ ||
ಪೊಡವಿಗುರುಳುತಿದ್ದನೇನ | ನುಡಿವೆ ಸತ್ವವ || ೩ ||

ಜ್ವಲಿಸಿ ಪ್ರಳಯದನಲನಂತೆ | ಬಲಿದು ಮುಷ್ಟಿಯಿಂದ ಖಳನ ||
ತಲೆಯನೆರಗೆ ತಿರುಗಿ ಬೀಳು | ತಿಳೆಯೊಳಾಕ್ಷಣ || ೪ ||

ಎದ್ದು ಮಾಯದಿಂದ ನಭದೊ | ಳಿದ್ದು ಸರಳ ಮಳೆಯಗರೆದ ||
ಹೊದ್ದಿತಂಧಕಾರವವನಿ | ಯುದ್ಧದಗಲಕೆ || ೫ || 148 ||

**ಭಾಮಿನಿ**
ಸಿಡಿಲು ಮಿಂಚುಗಳೊಡನೆ ಕಲ್ಪದ |
ಕಡೆಯ ದಿನವೆನೆ ಕಡಿದು ರುಧಿರದ |
ಝಡಿ ಮಳೆಗಳುರುಳಿದುದು ಮತ್ತಡಿಗಡಿಗೆ ಬಿರುಗಾಳಿ ||
ಪೊಡವಿ ನಡುಗಿತಿದೇನೆನುತ ಗರ |
ಹೊಡೆದ ತೆರ ಪಡೆಯೊರಗೆ ಶತ್ರುಹ |
ನಡಿಗೆರಗಿ ಭರತಾತ್ಮ ಸಂಭವ ನುಡಿದ ಖಾತಿಯಲಿ || ೧ || 149 ||

**ಸೌರಾಷ್ಟ್ರ - ತ್ರಿವುಡೆ**
ತಾತ ಬಿಡು ಬಿಡು ಭಯವ ಸುಭಟ |
ವ್ರಾತ ಧೈರ್ಯವ ತಾಳಿರೀ ಮಾ |
ಯಾತಿಶಯವನು ಹರಿಪೆ ನಾ ಕ್ಷಣ | ಮಾತ್ರದೊಳಗೆ || ೧ ||

ಎನುತ ರಾಮನ ನೆನೆದು ಭಾರಿಯ |
ಧನುವಿಗಾಮಹ ತಪನ ಶರವನು |
ಅನುಗೊಳಿಸಿ ಮಗುಳೆಳೆದು ಬಿಟ್ಟನು | ಕನಲುತಾಗ || ೨ ||

ಕಡಿದು ಕತ್ತಲೆ ಸಿಡಿದು ಸುರಿಮಳೆ |
ಝಡಿವ ಜಂಝಾವಾತವಡಗಿತು |
ಕಡು ದುರುಳ ದಾನವನನಿಟ್ಟನು | ಪಡಿಶರದಲಿ || ೩ ||

ಶರಹತಿಗೆ ಬೊಬ್ಬಿಡುತ ದಾನವ |
ಕೆರಳಿ ಹೆಬ್ಬುಲಿಯಾಗಿ ಬಾಯ್ದೆರೆ |
ದೊರಲಿ ಬರಲಿನ ಸುತನು ಮುಷ್ಟಿಯೊ | ಳೆರಗಿ ಕೆಡೆದ || ೪ ||

ಕಡುಗಿ ಖಳ ಭಲ್ಲೂಕ ರೂಪದಿ |
ಗುಡುಗುಡಿಸುತೈತಂದ ಜಾಂಬವ |
ಬಡಿದು ಕೆಡಹಿದನಮಮ ಮಾಯೆಯ | ನುಡಿಯಲೇನು || ೫ || 154 ||

**ಭಾಮಿನಿ**
ಇಂತು ಉರ್ವರೆಯಖಿಲ ದುರ್ದರ |
ಜಂತುರೂಪದಿ ಕಾಡಿ ಸೋತಾ |
ನಂತರದಿ ಖಳ ಗುಡುಗಿ ನಿಜರೂಪಾಂತು ಶರತತಿಯ ||
ಪಂಥದಿಂದಲಿ ಸುರಿಸುತೈತರ |
ಲಂತರಿಸದಾರ್ಭಟಿಸಿ ಪುಷ್ಕಳ |
ಕಂತುಹರ ಬಾಣದಲಿ ಕರ್ಬುರ ತಿಂಥಿಣಿಯ ತರಿದ || ೧ || 155 ||

**ಕಂದ**
ಅಳಿದುಳಿದೋರ್ವಂ ಓಡುತ |
ಖಳಸತಿಗೆರಗುತ ಕಂಬನಿಯಿಳುಹುತಲೆಂದಂ ||
ಬಲ ಸಹಿತನುವರದೊಳು ರಘು |
ಕುಲಜನೊಳ್ಕಾಡಿದಂ ತವ ಕಾದಲ ತಾನೆನುತಂ || ೧ || 156 ||

**ನಾದನಾಮಕ್ರಿಯೆ - ಅಷ್ಟ**
ಮಡಿದ ವಲ್ಲಭನೆಂಬುದನು ಕೇಳಿ | ಎದೆ |
ಹಿಡಿದೂರ್ಧ್ವಮುಖಿ ಮೂರ್ಛೆಯನು ತಾಳಿ ||
ಕಡಿದು ಬಿದ್ದೇಳುತಲಿಳೆಯಲಿ | ನೆಲ |
ನೊಡೆವವೋಲಳಲುತ ಬೊಬ್ಬಿಡುತಲಿ || ೧ ||

ಎನ್ನೊಳೇನ್ ಕೊರೆಯ ನೀ ಕಂಡೆಯ | ಬರಿ |
ದಿನ್ನು ಕೈ ಬಿಡುವರೆ ಗಂಡಯ್ಯ ||
ಮನ್ಮಥನಾಟಕಿನ್ಯಾರಯ್ಯ | ಸತ್ತೆ |
ನೆನ್ನುತ ಹೊಡೆದು ಬಾಯ್ ಮಂಡೆಯ || ೨ ||

ಬದುಕಲಾನೆಂತು ಈ ಬುವಿಯೊಳು | ಸಾಯು |
ವುದೆ ಸರಿಯದಕಿಂತ ಮೊದಲೊಳು ||
ವಧಿಸಿದವನ ಕೊಂದೀಕ್ಷಣದೊಳು | ಕುದಿ |
ಕುದಿಸುತಡಗನುಂಬೆವಂದದೊಳು || ೩ || 159 ||

**ಘಂಟಾರವ - ಅಷ್ಟ**
ಎಂದು ರೋಷದಿ ಬಂದತಿ ದೂರದಿ ||
ನಿಂದು ರಘುಜನ ಬಲದಿ ಮಾಂಡವಿ |
ಕಂದನಂದವ ಕಾಣುತ || ೧ ||

ಆರರೆ ಬೇಷ್ ಭಲ ಪುರುಷರೊಳೀರೂಪ ||
ಧರೆಯೊಳೆಲ್ಲಿಯು ಕಾಣೆನೆಂದಾ |
ದುರುಳೆ ಸ್ಮರಹತಿಯಿಂದಲಿ || ೨ ||

ಕೊಂಡು ಪೋಪೆನು ಸದನಕೀತನನೆನ್ನ ||
ಗಂಡನಾಗಿಸಿ ಸುಖಿಪೆನೆಂದಾ |
ದಿಂಡೆ ಮಾಯಕದಿಂದಲಿ || ೩ ||

ಅಂಧಕಾರವನೆಸಗಿ ಸುಂಟರಗಾಳಿ ||
ಯಂದದಿಂ ಪುಷ್ಕಳನ ನೆಗಹುತ |
ಸಂದು ಬಾಂದಳ ಮಾರ್ಗದಿ || ೪ ||

ಬರಿಸಿ ನಿದ್ರೆಯ ಮರಳಿ ಪೂರ್ವ ಪ್ರಜ್ಞೆ ||
ಬರದ ತೆರದಲಿ ಕರಿಸಿ ಮಾಟವ |
ದುರುಳೆ ತಾ ಗುಹೆಗೊಯ್ಯುತ || ೫ || 164 ||

**ಕಂದ**
ಇಳುಹುತ ದುಸ್ತರ ಗವಿಯಂ |
ನಳಿನಳಿಸುವ ನಂದನವಂಗೊಳಿಸುತ ಜವದಿಂ ||
ತಳೆಯುತ ದಿವ್ಯಾಕೃತಿಯಂ |
ಚಲುವನ ಮಗುಮಗುಳೀಕ್ಷಿಸುತಲಿ ನಲಿದೆಂದಳ್ || ೧ || 165 ||

**ಸುರುಟಿ - ಏಕ**
ಎಂಥ ಚಲುವ ವಹವಾ | ಎಳೆರವಿ |
ಯಂತೆ ಪ್ರಕಾಶಿಸುವ ||
ಕಂತುವೊ ಕೂಬರನೆಂತೆಂಬೆನೊ ಜ |
ಯಂತನೊ ಮುಗುಳೆ ವಸಂತನೊ ತಾನಿವ || ಎಂಥ || ೧ ||

ಪತಿಯಳಿದಿಹುದೊಂದು | ನೋಡಲು |
ಹಿತವಾಯ್ತೆನಗಿಂದು ||
ಅತಿಬಲನೊಳು ಮನುಮಥನಾಟದಿ ಸನು |
ಮತದಿಂ ಪ್ರತಿಕ್ಷಣ ಹತಿಸಲಿಕಾದುದು || ೨ ||

ಗಾಢಾಲಿಂಗನದಿ | ಕುಣಿಕುಣಿ |
ದಾಡುತಸುರೆ ಕ್ಷಣದಿ ||
ಮೋಡಿಗಳಚಿ ಕೆಲಕೋಡಲು ಭಾರತ |
ನಾಡಿಸುತೆವೆಗಳ ನೋಡುತ ನಾಲ್ಬದಿ || ೩ || 168 ||

**ಭಾಮಿನಿ**
ಹರಹರೇನಾಶ್ಚರ್ಯವೀ ವನ |
ಸಿರಿಯ ಬಣ್ಣಿಸಲರಿದು ಸುಮಫಲ |
ಭರಿತ ತರುಲತೆಯುಗ್ರ ಖಗಮಿಗಮಿಥುನವದುಭುತವು ||
ಧರೆಯೊಳೊಂದಿನ್ನೊಂದರಾಸರೆ |
ಹೊರತು ಬಾಳಲ್ಕರಿದು ನಾನೀ |
ಗರಿಯಲೊಂಟಿಗ ಬದುಕಲೆಂತುಟೊ ಸ್ಮರಹತಿಯೊಳೆಂದ || ೧ || 169 ||

**ವಾರ್ಧಕ**
ಅತ್ತ ನಿಜಮೋಹರದಿ ಪುತ್ರನಂ ಕಾಣದರ |
ಸುತ್ತಿರುವ ಶತ್ರುಹಗೆ ಬಿತ್ತರಿಸಿತಾಕಾಶ |
ಮತ್ತದಾನವಿಯೊಯ್ದಳುತ್ತರದಿ ತೋರುವ ಮಹತ್ತರದ ಗುಹೆಯೊಳಿರಿಸಿ ||
ಚಿತ್ತಪಲ್ಲಟಗೈದು ಚಿತ್ತಜನ ಕೇಳಿಗೆಳ |
ಸುತ್ತಿಹಳು ಬರಿದಿಲ್ಲಿ ಹೊತ್ತುಗಳೆಯದಿರೆನುತ |
ಮೃತ್ಯುವೆನೆ ಬಲಸಹಿತಲತ್ತ ಪೊರವಂಟನು ಸುಮಿತ್ರಾತ್ರಭವನಿತ್ತಲು || ೧ || 170 ||

**ಮಿಶ್ರ ಮಾಧವಿ - ತ್ರಿವುಡೆ**
ಬಂದಳಸುರೆ ತೋಷದಿಂದಲೆಯುತಲಿ |
ಮಂದಹಾಸದೊಳಂಚೆಯಂದಗತಿಯಲಿ |
ತಂದೀರ್ಪ ಹದಿಹರೆಯದ ಮಿಂಚುತಲಿ |
ಚಂದನ ಮೃಗ ಮದಗಂಧ ಬೀರುತಲಿ ||
ಸುಂದರನ ವಶಗೈವೆ ನಿಮಿಷದೊ |
ಳೆಂದು ಪೇರುರ ಮುಂದೆ ಚಾಚುತ |
ನಿಂದವಳ ಮೊಲೆಯಂದ ವೀಕ್ಷಿಸಿ |
ಬೆಂದು ಪುಷ್ಕಳನೆಂದ ಮನದಲಿ || ಬಂದ || ೧ || 171 ||

**ಕಾಪಿ - ಅಷ್ಟ**
ಭಲರೆ ಏನಿದುವೆ ಸೌಂದರ್ಯ | ದ್ಯುತಿ |
ಬೆಳಗುವಂಗದ ಹೊಳೆಹೊಳೆ ಸೌಕುಮಾರ್ಯ ||
ಇಳೆಯೊಳೀಪರಿ ಸೊಬಗರಿಯ | ಲಿಲ್ಲೀ |
ಹಳುವದೊಳೆನಗೀಕೆ ದೊರೆತುದಾಶ್ಚರ್ಯ || ೧ ||

ಧರೆಯ ಲಾವಣ್ಯವನೆಲ್ಲ | ತೆಗೆ |
ದೆರಕಹೊಯ್ದಿವಳ ನಿರ್ಮಿಸಿದ ಕಬ್ಬಿಲ್ಲ ||
ಬೆರೆಯದೀಕೆಯ ಬದುಕಲ್ಲ | ಎಂದಾ |
ತರುಣಿಯನಡ್ಡೈಸಿ ಒರೆದನೀಸೊಲ್ಲ || ೨ || 173 ||

**ಬೇಗಡೆ - ತ್ರಿವುಡೆ**
ನಾರಿ ನಿಲ್ ನಿಲ್ ವಿಮಲೆ | ನೀನ್ಯಾರು ವೈ |
ಯ್ಯಾರಿ ಕುಸುಮಕೋಮಲೆ || ಪ ||
ನಾರಿ ನಿಲ್ ಬಿಸಜಾರಿ ಮುಖಿ ಝಷ | ದೇರನುರು ಕೈ ವಾರಿ ಮಿಗೆ ಸಿಂ |
ಗಾರಿ ಬಲು ಖಿಷಿಯೇರಿ ಕರುಣೆಯ | ದೋರಿ ನಿನ್ನಯ ಊರ ಸಾರೆಲೆ || ಅ. ಪ. ||
ನಾಮವೇನ್ ಸುಗುಣೆ ನಿನ್ನ | ಪೆತ್ತಿರುವ ಸು |
ಧಾಮರ್ಯಾರರುಹು ಚಿನ್ನ ||
ಕಾಮದ | ವಿಷವೇರುತಿದೆ ನೀ | ಪ್ರೇಮದ | ಸುಧೆಯೆರೆದು ಪೊರೆ ನಿ |
ಸ್ಸೀಮದ | ಚಲುವೆನಿಪ ವಿಷಯಾ | ರಾಮದ || ಸುಖಸಾರದ ||
ರಾಮಣೀಯಕ ರತಿಗೊಳದಿ ನಿ | ಸ್ಸೀಮ ದಿಂದೀಜಾಡೆ ಮನ್ಮನ |
ಕಾಮನೆಯ ಸ್ವಾಮಿನಿಯೆ ಕರುಣದಿ | ನೀ ಮುದದಿ ಬಾ ತಾಮರಸಮುಖಿ || ನಾರಿ || ೧ ||

ಜಾರಿತು ಮಿಗವೆನುತ | ನಕ್ತಂಚರ |
ನಾರಿ ಮನದೊಳುಬ್ಬುತ ||
ಸಾರುತ | ಸಮ್ಮೋಹನದ ಬಳಿ | ಸೇರುತ | ಆನನದಿ ಕಿರುನಗೆ |
ಬೀರುತ | ಉಂಗುಟದೊಳವನಿಯ | ಗೀರುತ | ಪೇಳಿದಳೆರಗುತ ||
ಧೀರನಾಸುರವಾರವಧು ಸಂ | ಚಾರಕೈದಿದೆ ನೀ ರಸೆಗೆ ನೀ |
ನ್ಯಾರ ಸುತ ನಿನ್ನೂರ ನಾಮವ | ಸಾರೆನಲು ಸ್ಮೃತಿ ಹಾರಿ ಭಾರತ || ೨ || 175 ||

**ಮಧುಮಾಧವಿ – ತ್ರಿವುಡೆ (ಸೌರಾಷ್ಟ್ರ - ತ್ರಿವುಡೆ)**
ಮಾದಳಾಧರೆ ಕೇಳು ನಾನ್ಯಾ |
ರಾದರೇನತ್ಯಧಿಕ ಬಲ್ಲಿದ |
ಕಾದಲನು ನಿನಗೆಂದು ತಿಳಿಯು | ನ್ಮಾದಕಾಂಗಿ || ೧ ||

ಗಂಡ ನೀನಹೆಯಾದರೆನ್ನಯ |
ದುಂಡು ಕುಚಗಳನಮುಕು ಚುಂಬಿಸು |
ಗುಂಡಿಗೆಯ ಬಿಗಿದಪ್ಪು ಬಾಬಾ | ಗಂಡುಗಲಿಯೆ || ೨ ||

ಎನಲಿವನು ಮತ್ತಿನಲಿ ಮುಂಬರಿ |
ವನಿತರಲಿ ಪುಟನೆಗೆದು ದಾನವಿ |
ಘನಜವದಿ ಬಿಗಿದಪ್ಪುತಲಿ ಚುಂ | ಬನದ ಮಳೆಯ || ೩ || 178 ||

**ವಾರ್ಧಕ**
ಸುರಿಸುತುಭಯತರು ಮೈಮರೆದಿರಲ್ಕನಿತರಲಿ |
ಭರತಾವರಜ ಬಂದು ನಿರುಕಿಸುತ್ತಿದನು ಮುಂ |
ದರಿದು ಕೋಪದಿ ಹನುಮನುರುವಜ್ರ ಮುಷ್ಟಿಯಿಂದೆರಗಿದಂ ದಾನವಿಯನು ||
ಕರಹತಿಗೆ ಮಾಯಕದ ಪೊರೆಗಳಚಿ ದುರುಳೆ ಸ |
ತ್ತುರುಳಿದಳು ಗಿರಿಯೆನಲ್ ಪರಿಕಿಸುತ ಪುಷ್ಕಳಂ |
ಮರಳಿ ಪೂರ್ವ ಸ್ಮರಣೆ ಧರಿತ ಲಜ್ಜೆಯಲಿ ಬಂ | ದೆರಗಿದಂ ಕಿರಿಯಯ್ಯಗೆ || ೧ || 179 ||

**ಭಾಮಿನಿ**
ಸುರರರಲ ಮಳೆಗರೆದರಣುಗನ |
ಕರುಣದಿಂ ಮನ್ನಿಸುತ ಶತ್ರುಹ |
ಪೊರಟ ಪಡೆಸಹ ತುರಗ ಕುಂಡಲಪುರದ ನಂದನವ ||
ತ್ವರಿತದಿಂದೊಳಪೊಕ್ಕುದೀಕ್ಷಿಸಿ |
ಚರರು ಹಯವೆಲ್ಲಿಯದು ದೂರದಿ |
ಬರುವುದಾರದೊ ದಂಡು ಮಹದಚ್ಚರಿಯಿದೆಂದೆನುತ || ೧ || 180 ||

**ಕಾಂಭೋದಿ - ಝಂಪೆ**
ಮತ್ತೆ ಹಯದೆಡೆಗೈದಿ | ನೆತ್ತಿಯಲಿ ಬಿಗಿದಿಹ ವಿ |
ಚಿತ್ರದೋಲೆಯ ಬಿಡಿಸಿಕೊಂಡು ||
ಎತ್ತಲೈದದ ತೆರದೊ | ಳಿತ್ತು ಕಾವಲನೊಡೆಯ |
ನತ್ತ ಸಾಗಿದರು ಭಯಗೊಂಡು || ೧ ||

ಧರಣೀಂದ್ರ ಸುರಥ ವಿಷ್ಟರದೊಳೊಪ್ಪಿರೆ ಚರರು |
ಶಿರವ ಬಾಗುತಲಂಘ್ರಿಯುಗಕೆ ||
ಕರವ ಜೋಡಿಸುತೆಂದ | ರೊರೆವುದೇನ್ ಪೊಸತೊಂದು |
ತುರಗ ಬಂದಿಹುದೆಮ್ಮ ಪುರಕೆ || ೨ ||

ಅಂಗಾಂಗದಲಿ ಹೇರು ಬಂಗಾರವಿಹುದಾ ತು |
ರಂಗಮದ ಹಣೆಗೆ ಬಂಧಿಸಿದ ||
ಸಿಂಗಾರ ಪಟವೆನುತ | ತುಂಗವಿಕ್ರಮಗೀಯೆ |
ಸಂಗತಿಯ ನೃಪತಿ ವಾಚಿಸಿದ || ೩ || 183 |

**ವಾರ್ಧಕ**
ಶ್ರೀಮತ್ಸಮಸ್ತ ಬಿರುದಾಂಕಿತಂ ಧರಣೀ ಮ |
ಹಾ ಮಂಡಲೇಂದ್ರನಿಕ್ಷ್ವಾಕುಕುಲ ಸಾಕೇತ |
ಧಾಮನಾ ದಶರಥ ನೃಪಾತ್ಮಭವ ಜಾನಕೀ ರಾಮಂ ರಣಾಗ್ರ ಭೀಮಂ ||
ತಾ ಮಖವನೆಸಗಿ ಬಿಟ್ಟಿಹ ವಾಜಿ ಮಿಡುಕುಳ್ಳ |
ಭೂಮಿಪರು ಕಟ್ಟುವುದು ಕಟ್ಟದರು ಕಪ್ಪವಂ |
ನೇಮದಿಂದಿತ್ತು ಬಲವಹುದಿದರ ಜೊತೆಗೆ ನಿಸ್ಸೀಮ ಶತ್ರುಹನೀರ್ಪನು || ೧ || 184 ||

**ಭಾಮಿನಿ**
ಇಂತಿರುವ ಲಿಖಿತವದ ಕಂಡ |
ತ್ಯಂತ ಹರುಷದಿ ರಾಘವೇಂದ್ರನ |
ಅಂತರಂಗದಿ ನಮಿಸಿ ಭೂಪತಿ ಮಂತ್ರಿಗಳಿಗೆಂದ ||
ಸಂತಸದ ದಿನವಿಂದು ಪುರದಾ |
ದ್ಯಂತ ಸಿಂಗರ ದೇವತಾರ್ಚನೆ |
ಯಂತಳುವದೆಸಗಲ್ಕೆ ನೇಮಿಪುದಂತರಿಸದೆಂದು || ೧ || 185 ||

**ಮಧ್ಯಮಾವತಿ - ತ್ರಿವುಡೆ**
ಕೇಳಿ ಸಚಿವ ಸಭಾಸದರು ಶ್ರೀ |
ಲೋಲ ರಾಘವನೆಸ್ಗಹಯ ತಾ |
ಕಾಲಿರಿಸಿತೀಯೆಡೆಗೆ ಪುಣ್ಯವ |
ಪೇಳಲೇನು || ಧನ್ಯನು || ೧ ||

ತುರಗವನು ಬಂಧಿಸುತ ಸಾಹಸ |
ಮೆರೆದು ನೋಯಿಸೆ ಶತ್ರುಹನನೆಳೆ |
ತರಳರಳುವಿಗೆ ಬರುವ ತಾಯೊಲು |
ಹರಿಯು ಬಹನು || ಕಾಂಬೆನು || ೨ ||

ಚಿನುಮಯನ ಕಣುದಣಿಯಲೀಕ್ಷಿಸಿ |
ಜನುಮ ಸಾರ್ಥಕಗೈದು ಭವ ಬಂ |
ಧನವ ಹರಿದೊಗೆದುತ್ತಮೋತ್ತಮ |
ಘನ ಪದವನು || ಪಡೆವೆನು || ೩ || 188 ||

**ಭಾಮಿನಿ**
ಭರದೊಳಶ್ವವ ತರಿಸಿ ಬಂಧಿಸು |
ತರಸ ಸೇನಾಧ್ಯಕ್ಷನನು ಕರ |
ದೊರೆದ ನೆರಹಿಸು ಬಲವ ರಾಮಾವರಜ ಧುರಕೆಂದು ||
ಬರಿಸಿ ತನ್ನಯ ಪುತ್ರಮಿತ್ರಾ |
ದ್ಯರಿಗೆ ತಿಳುಹುತ್ತೀರ್ದನತ್ತಲು |
ಅರಿತು ಶತ್ರುಹಗೆಂದ ಮಂತ್ರೀಶ್ವರ ಸುಮಂತ್ರಾಖ್ಯ || ೧ || 189 ||

**ಕೇದಾರಗೌಳ - ಅಷ್ಟ**
ತುರಗ ಕಣ್ಮರೆಯಾದು | ದರಿತೆ ಕುಂಡಲಪುರ |
ದರಸ ಕಟ್ಟಿಹನದನು ||
ಅರಿಗಳಿಗಂಕುಶ | ವರರಾಮ ಭಜಕನು |
ಸುರಥನಾಮಕನೆಂಬನು || ೧ ||

ಹಯವ ಬಿಡುವನಲ್ಲ | ಭಯಕೆ ಬಾಗುವನಲ್ಲ |
ನಯದಿಂದ ಕಾರ್ಯವನು ||
ಜಯಿಸಬೇಕೆನಲು ಚಿಂ | ತೆಯ ತಾಳಿ ಮನದಿ ಸಂ |
ಧಿಯನೆಣ್ಣಿ ಶತ್ರುಘ್ನನು || ೨ ||

ಕರೆಯುತಂಗದಗೆಂದ | ತುರಗವ ಬಿಡುವುದೆಂ |
ದರಸ ಸುರಥನೊಳಿಂದು ||
ಅರುಹಿ ಸಂಧಿಯಗೈದು | ತ್ವರಿತದಿ ಬಹುದೆಂದು |
ಹರಸಿ ಬೀಳ್ಕೊಟ್ಟನಂದು || ೩ || 192 ||

**ಭಾಮಿನಿ**
ತಳುವದಂಗದ ರಾಜಬೀದಿಯ |
ತುಳಿಯುತಿರಲಿಕ್ಕೆಲದೊಳಂಗಡಿ |
ಗಳನು ಮುಚ್ಚಲು ಕೆಲರು ಹಲರಾಯುಧವ ತುಡುಕಿದರು ||
ಎಳೆಯರೀಕ್ಷಿಸಿ ಕದಳಿ ಕೊಬ್ಬರಿ |
ಗಳ ಪಿಡಿದು ನಂಬಿಸುತ ಬರೆ ಮುಂ |
ತಳೆದು ತಲುಪುತ ಕುಂಡಲೇಂದ್ರನ ನಿಳಯ ದ್ವಾರವನು || ೧ || 193 ||

**ಕಂದ**
ಚಾರರೊಳುಸುರಿದ ಪರಬಲ |
ವಾರಿಧಿಯಿಂದಂಗದ ತಾ ಸಾರಿಹೆನೆನುತಂ ||
ಭೋರನೆ ತಿಳುಹಿರಿ ನೃಪಗೆನು |
ತೋರುವ ಬಂದಡಿಗೆರಗುತ ಧಾರಿಣಿಪತಿಗಂ || ೧ || 194 ||

**ಕೊರವಿ - ಏಕ**
ಸರಣೂ ಸರಣು ಜೀಯ | ಕಾಪಾಡು ವಡಿಯ |
ಸರಣೂ ಸರಣು ಜೀಯ ||
ಸರಣೆನ್ನೊಡೆಯ | ಯಿರೋದಿ ಕಡೆಯ ||
ಬರಾಬ್ರಿ ದಡಿಯ | ತೆರಳೈತ್ರೀಕಡೆಯ || ಸರಣೂ || ೧ ||

ಗಡವನ ಕಂಡ್ಬಂಗೈತೆ | ನುಡಿ ಬರುತ್ತೈತೆ |
ಕಡು ಚೋಚ್ಗನಂಗಾಗೈತೆ ||
ಒಡೇರ ಕೂಡ್ಲೀ ಜಂಬ್ರೈತಂತೆ |
ಬಿಡಿ ವಳಗೀಟ ಗಡನಂಬ್ರೈತೆ || ಸರಣೂ || ೨ ||

ಚರರು ಪೇಳಿದ ಮಾತನು | ಲಾಲಿಸಿ ಭೂಪ |
ನೊರೆದ ಬಂದಿರುವಾತನು ||
ಇರಲ್ಯಾವನವನೊಳ | ಕರೆಯೆಂದೆನಲವ |
ತಿರುಗಿ ಕಳುಹಿ ವನ | ಚರ ಮುನ್ನಡೆದನು || ೩ || 197 ||

**ಭಾಮಿನಿ**
ಬರಲು ಕುಳ್ಳಿರಿಸುತಲಿ ಮತ್ತುಪ |
ಚರಿಸುತಾತಗೆ ನೃಪತಿ ಕಾರ್ಯಂ |
ತರಗಳೇನಾರಟ್ಟಿದರು ನೀನಾರು ಸಾರೆನಲು ||
ಸುರಪಸುತಸುತನಂಗದನು ರಘು |
ವರನ ಮುಖಹಯದೊಡನೆ ಬಂದವ |
ಇರುವ ಪುರ ಕಿಷ್ಕಿಂಧೆಯೆನ್ನಯ ಬರವ ಕೇಳೆಂದ || ೧ || 198 ||

**ಮಧ್ಯಮಾವತಿ - ಅಷ್ಟ**
ಯಾಗದಶ್ವವನು | ಕಟ್ಟಿಹೆಯದ |
ಕಾಗಿ ಶತ್ರುಹನು ||
ಸಾಗಿ ವಿಚಾರಿಪುದೀಗೆನುತಲಿ ಸ್ನೇಹ |
ಕಾಗಿಯಟ್ಟಿಹನೆನ್ನನು | ಹಯವು ಸಹಿ |
ತಾಗಿಯೀವುದು ಹೊನ್ನನು | ಭೂಪತಿ ಮಿತ್ರ |
ನಾಗಿ ಕಾಂಬನು ನಿನ್ನನು | ಸ್ವಾಮಿಯ ಕಾರ್ಯ |
ಸಾಗಲಿ ತೆರೆ ಕಣ್ಣನು || ನೃಪತಿ ನೀನು || ೧ ||

ಆ ರಘೂದ್ವಹನು | ಮಾನವನಲ್ಲ |
ಶ್ರೀ ರಮಾಮಾಧವನು ||
ಧಾರಿಣಿ ಹೊರೆಯ ನಿವಾರಿಸೆ ಮನುಜ ಶ |
ರೀರವಾಂತವನು | ಕೊಂದನು ದೈತ್ಯ |
ವಾರವನಂತವನು || ಅಹಲ್ಯೆಯು |
ದ್ಧಾರ ವೃತ್ತಾಂತವನು | ಬಲ್ಲೆಯಯಿಂತ |
ಪಾರ ದೃಷ್ಟಾಂತವನು || ಗ್ರಹಿಸು ನೀನು || ೨ ||

ಈ ಲವಣಾರಿಯನು | ಗೆಲ್ವವರಿಲ್ಲ |
ಕೇಳಿ ನೀನರಿಯೆಯೇನು ||
ಸೋಲಿಸಿದನು ದೇವ | ಶೈಲ ಯುದ್ಧದಲಿ ತ್ರಿ |
ಶೂಲ ಧಾರಿಯನು | ಮಾರ್ಮಲೆತ ಬಿ |
ಲ್ಲಾಳ್ ಗಳ ಗೋರಿಯನು | ಸೇರಿಸುತಿಲ್ಲಿ |
ಕಾಲಿಟ್ಟ ಸ್ವಾರಿಯನು | ಆನತಪರಿ |
ಪಾಲನಕಾರಿಯನು || ದ್ವೇಷಿಪರೇನು || ಯಾಗ || ೩ || 201 ||

**ಸೌರಾಷ್ಟ್ರ - ತ್ರಿವುಡೆ**

ಎಲವೊ ಕಪಿವರ ಸಲದು ನಿನ್ನಯ |
ಗಳಹು ತೆಗೆ ಶ್ರೀರಾಮಚಂದ್ರನು ||
ಜಲಜಲೋಚನನೆಂಬುದನು ನಾವ್ | ತಿಳಿಯದವರೆ || ೧ ||

ಮತ್ತೆ ಶತ್ರುಹಗಿತ್ತುಹಾದ್ಯರ |
ಪೃಥ್ವಿಗೊರಗಿಸದಿರಲು ನಮ್ಮನು ||
ಹೆತ್ತೊಡಲು ಬರಿದಹುದು ಶ್ರೀಹರಿ | ಭಕ್ತನಹೆನೆ || ೨ ||

ರಾಘವೇಂದ್ರನ ಪದವ ಕಾಣದೆ |
ಯಾಗದಶ್ವವ ಬಿಡೆವು ನಿಮ್ಮಿಂ ||
ದಾಗದನುವರ ಕರೆಸಿಕೊಂಬುದು | ಬೇಗ ಹರಿಯ || ೩ ||

ಪೌರುಷವ ಬಿಡು ನೃಪತಿ ಹಗೆಗೈ |
ದಾರು ಬದುಕಿಹರಾದಿಮೂರ್ತಿಯ ||
ವಾರುವವ ಬಿಡದಳಿಯದಿರು ನಾ | ಸಾರಿ ಪೇಳ್ವೆ || ೪ ||

ಕದನ ನಿಧನಕ್ಕಂಜಿ ಕಟ್ಟಿದ |
ಕುದುರೆಯನು ಬಿಡಲುಂಟೆ ಬಾಹುಜ ||
ಒದರದಿರು ನಡೆ ತೋರ್ಪೆ ಭುಜಬಲ | ದಧಟನೆಂದ || ೫ || 206 ||

**ಭಾಮಿನಿ**

ದಿಟ್ಟತನವಿನಿತಿರಲು ಕದನವ |
ಕೊಟ್ಟು ಕಾಂಬುವುದೆನುತಲಂಗದ |
ಘಟ್ಟನಲ್ಲಿಂ ಪೊರಟ ದಿನಮಣಿಯಸ್ತಗತನಾದ ||
ಶತ್ರುಹರನಿದನರಿತು ಸಮರವೆ |
ನುತ್ತ ಸಾರಿದ ಸೈನ್ಯ ಕತ್ತಲು |
ಮಿತ್ರನುದಯದೊಳಿತ್ತ ಸುರಥಾತ್ಮಜ ಸುದರ್ಶನನು || ೧ || 207 ||

**ಮಾರವಿ - ಏಕ**
ಕರಿರಥ ಪಾಯ್ದಳ | ತುರಗ ಮಹರ್ಬಲ |
ಪೊರಡಿಸಿ ವಿಗ್ರಹಕೆ ||
ಭರಿತಾಯುಧಗಳ | ವರಸ್ಯಂದನದೊಳ |
ಗಿರಿಸುತ ತಾಯ್ ಗೃಹಕೆ || ೧ ||

ನಡೆದಾಕೆಯ ಪದ | ಜಡಜಕೆ ವಂದಿಸಿ |
ನುಡಿದೀ ವಾರ್ತೆಯನು ||
ಒಡಬಡಿಸುತ್ತಲಿ | ಪಡೆಯುತ ಹರಕೆಯ |
ಮಡದಿ ಸುಪ್ರಭೆಗಿದನು || ೨ ||

ತಿಳುಹಿಸಿ ತೆರಳುವ | ದೊಳಿತೆನ್ನುತ ಮುಂ |
ತಳೆದು ಸುದರ್ಶನನು ||
ಘಳಿಲನೆ ಬಂದಾ | ನಿಳಯಕೆ ಕಾಲಿಡೆ |
ಲಲನಾ ಮಣಿ ತಾನು || ೩ || 210 ||

**ಮಧ್ಯಮಾವತಿ - ತ್ರಿವುಡೆ**
ಬರವ ಕಂಡಳು ಬಾಲೆ ನಿರ್ಭರ |
ಹರುಷದಿಂದಿರೆದ್ದು ಕಾಂತನ |
ಕರವಿಡಿದು ಕರೆತಂದು ಕೂಡ್ರಿಸಿ |
ಚರಣಕೆರಗಿ || ವಿನಯದಿ || ೧ ||

ಸ್ವಾರಿಯಾಗಮ ಚೋದ್ಯ ಸ್ಯಂದನ |
ವೇರಿ ಬಂದುದಪೂರ್ವ ಕರದಲಿ ||
ಭಾರಿಧನು ತೂಣೀರ ಬೆನ್ನಿನೊ |
ಳೇರಿತೇಕೆ || ಸಮರಕೆ || ೨ ||

ಭಾಮಿನೀಮಣಿ ಕೇಳು ಮತ್ಪಿತ |
ರಾಮ ಸೇನೆಯ ಧುರಕೆ ಪೊರಟಿಹ |
ನೇಮದಿಂದೈದುವೆನು ರಿಪುಬಲ |
ಹೋಮಕಾನು || ಧೀರನು || ೩ || 213 ||

**ಕಲ್ಯಾಣಿ - ಏಕ**
ಆವ ರಾಮ ಕಲಹವ್ಯಾರೊಳ್ | ಪ್ರಾಣಕಾಂತ || ಕಾರ್ಯ |
ವಾವುದೆಂದು ತಿಳುಹು ದಯದಿ | ಪ್ರಾಣಕಾಂತ ||
ರಾವಣಾರಿಯಜ್ಞದಶ್ವ | ಎಲೆ ಕಾಂತೆ || ಕಟ್ಟಿ ||
ಗೈವ ಸಮರ ಶತ್ರುಹನೊಳು | ಎಲೆ ಕಾಂತೆ || ೧ ||

ರಾಘವೇಂದ್ರನಾದಿ ವಿಷ್ಣು | ಪ್ರಾಣಕಾಂತ || ಮಾವ |
ಲೋಗನಾದನೆಂತು ಹರಿಗೆ | ಪ್ರಾಣಕಾಂತ ||
ತಾಗಿ ಶತ್ರುಹರನ ಕೆಡಹಿ | ಎಲೆ ಕಾಂತೆ | ಬರಿಸಿ |
ನಾಗಶಯನನಡಿಯ ತೋರ್ಪೆ | ಎಲೆ ಕಾಂತೆ || ೨ ||

ಕಲಹಬೇಡ ಕಾಲ ಪಿಡಿವೆ | ಪ್ರಾಣಕಾಂತ || ಅಷ್ಟ |
ಸುಲಭವಲ್ಲ ರಾಮಾಗಮನ ಪ್ರಾಣಕಾಂತ ||
ಬಲುಹನರಿಯದಾದೆಯೇನೆ | ಎಲೆ ಕಾಂತೆ | ಮುಳಿದು |
ನಿಲಲು ಮೂಲೋಕಗಳ ಗೆಲುವೆ | ನೆಲೆ ಕಾಂತೆ || ೩ || 216 ||

**ಭಾಮಿನಿ**
ಬಲವದೆನಿತಿರ್ದರೆಯು ಮಾನವ |
ಗೆಲಬಹುದೆ ಪೇಳ್ ದೈವಶಕ್ತಿಯ |
ಕಲಹವಲ್ಲವು ಕಾಂತ ಕುಲಕಿದು ವಿಲಯವೆಂದಳಲು ||
ಅಳಲಬೇಡೆಲೆ ಪ್ರಮದೆ ಭಕ್ತಿಯ |
ಬಲುಹಿಗೆಣೆಯಿಲ್ಲೆನುತ ಪೊರಮಡ |
ಲಳುಕದಾರತಿಯೆತ್ತಿ ಸೇಸೆಯ ತಳಿದು ಕಳುಹಿದಳು || ೧ || 217 ||

**ಘಂಟಾರವ - ಅಷ್ಟ**
ಸತಿಯ ಸೇಸೆಯ ಪತಿಕರಿಸುತಲೈದಿ ||
ಅತುಲ ಬಲ್ಲದ ಹಿತದಿ ತನ್ನಯ |
ಪಿತಗೆರಗುತಿಂತೆಂದನು || ೧ ||

ತರಳರೀರೈವರಿರಲು ಬಲಾಢ್ಯರು ||
ಧುರಕೆ ನೀನೇ ಕರಿ ಬಲವ ನು |
ಗ್ಗರೆದು ಬರುವೆನು ನಿಮಿಷದಿ || ೨ ||

ಹನುಮನ್ಯಾಕೆ ತ್ರಿಣಯ ಬಂದರು ಗೆಲ್ವ ||
ನೆನಲು ದಳದೊಡೆತನವನೊಪ್ಪಿಸಿ |
ಜನಪ ಕಳುಹಿದನಣುಗನ || ೩ || 220 ||

**ಭಾಮಿನಿ**
ಅನುಜರೊಡಗೊಂಡಮಿತ ಸೇನಾ |
ವನಧಿ ಮಧ್ಯದೊಳಾಸುದರ್ಶನ |
ಮಣಿರಥದಿ ಪೊರವಂಟ ಭಾರಿಯ ಧನುವನೊದರಿಸುತ ||
ರಣಕೆ ಬರುತಿರುವರಿಯ ಕಂಡಾ |
ಕ್ಷಣದಿ ಪುಷ್ಕರನುರು ಚತುರ್ಬಲ |
ವನು ಜವದೊಳಣಿಗೊಳಿಸಿ ನಿಂದನು ಧ್ವನಿಸಿ ಚಾಪವನು || ೧ || 221 ||

**ಭೈರವಿ - ಅಷ್ಟ**
ಭಳಿರೆ ನೃಪಾತ್ಮಜನೆ | ಭಾಪುರೆ ಮಝು |
ಭಲರೆ ಮಹಾಭುಜನೆ ||
ಕಲಿಗಂಜದಿರುವ ಪುಷ್ಕಳ ನಾನು ನಿಮಿಷದಿ |
ಗೆಲದಿರೆ ಬಾಹುಜನೆ || ೧ ||

ಬರಿ ಹೊಗಳಿಕೆ ಯಾತಕೆ | ಎನ್ನಯ ಭುಜ |
ಸಿರಿಯ ಸ್ತ್ರ ಸಂಘಾತಕೆ ||
ತರುಬಿ ನಿಲ್ಲುತ ಸತ್ವವಿರೆ ಸೆಣಸುವುದಲ್ಲ |
ದಿರೆ ಸಾರೆಲವೊ ಗೃಹಕೆ || ೨ ||

ಸಾರಲೆಂಬುವುದ್ಯಾರಿಗೆ | ಪೋಪೆನೆ ನಿನ್ನ |
ಸಾರಿಸದೆಮನೂರಿಗೆ ||
ಘೋರನೆಮ್ಮಯ ಮಖವಾರುವವನು ಕೊಟ್ಟು |
ಸಾರು ಜೀವದಿ ಪುರಿಗೆ || ೩ ||

ಬುವಿಯೊಳು ಬದುಕಬೇಕೆ | ಶ್ರೀರಾಮನ |
ತವಕದಿ ಕರೆ ಸುಜೋಕೆ ||
ಬವರಶಾಪಟರೆಮ್ಮಾಹವದಿ ವಾಳಯಸಹ |
ಜವನೂರ ಸೇರಲೇಕೆ || ೪ ||

ಕರಟವನೊಡೆಯಲಿಕೆ | ವಜ್ರವೆ ನಿಮ್ಮ |
ತರಿದಶ್ವ ಬಿಡಿಸಲಿಕೆ ||
ವರ ರಾಮಚಂದ್ರ ದೇವರು ಬೇಕೆ ನೋಡೆಮ್ಮ |
ಪರಿಯೊಂದೆಚ್ಚನು ಕ್ಷಣಕೆ || ೫ || 226 ||

**ವಾರ್ಧಕ**
ಮುರಿದದ ಸುದರ್ಶನಂ ಮುರಿಶರದೊಳಿಡೆ ಮರಳಿ |
ವರುಣ ವಾಯು ವ್ಯಾಹಿ ಗರುಡ ತೈಮಿರ ಮಿಹಿರ |
ಉರುಭಯಂಕರ ರೌದ್ರಕಂಕಾಲ ಸರಸಿರುಹಭವವೆಂಬ ಬಾಣಗಳಲಿ ||
ಧುರಪರಾಕ್ರಮರುಭಯರುರುಬಿದರ್ ಸರಿಸಮದಿ |
ಕೆರಳಿ ಪುಷ್ಕಳನು ತೆಗೆದಿರಿಸಿದಕ್ಷಯ ಶರವ |
ತರಿಯುತಿರೆ ಕವಲಂಬು ಉರವ ಕೀಲಿಸಿತೊಡನೆ ಅರಸುಮಗ ಮೈಮರೆದನು || ೧ || 227 ||

**ಭಾಮಿನಿ**
ಕಾಣುತಿದನವನನುಜ ಸುಬಲ ಸು |
ಷೇಣಮುಂತಪ್ಪಷ್ಟಕರು ಸು |
ತ್ರಾಣದಿಂ ಹೊಯ್ದಾಡುತಲಿ ಭರತಾಣುಗನ ಧುರದಿ ||
ಕ್ಷೋಣಿಗೊರಗಿದರವನಿಪನ ಕಿರಿ |
ಸೂನು ವೀರಸುಧನ್ವ ಕಂಡಿದ |
ಬಾಣಮಳೆಗರೆದೆಂದನಾ ರಾಮಾನುಜಾತ್ಮಜಗೆ || ೧ || 228 ||

**ತುಜಾವಂತು - ಮಟ್ಟೆ**
ಎಲವೊ ದುರುಳ ನಿಲ್ಲು ನಮ್ಮ | ಬಲವನೆಲ್ಲವ |
ಗೆಲಿದೆಯಾದರೇನುತ ಲೆಯ | ನುಳುಹಬಲ್ಲವ ||
ಜಲಜನೇತ್ರನೊಬ್ಬನವನ | ನಿಲದೆ ಕರೆಯಿಸು |
ಇಳೆಯೊಳ್ಯಾವ ಪೆಸರು ನಿನಗೆ | ತಳುವದರುಹಿಸು || ೧ ||

ದುರುಳನ್ಯಾವನೆಲವೊ ಮಖದ | ಹರಿಯ ಬಂಧಿಸಿ |
ತಿರುಗಿ ನಿಂದ ಖಳನದ್ಯಾರು | ಧುರವ ಸಂಧಿಸಿ ||
ಶಿರವನಿಳುಹೆ ನಿನ್ನ ನಿಖಿಲ | ಧರಣಿ ವಂದ್ಯನ |
ಕರೆಸಬೇಕೆ ಪುಷ್ಕಳಾಖ್ಯ ಭರತನಂದನ || ೨ ||

ಭರತಜಾತ ಕೇಳು ಸಮರ | ಸರಸವಲ್ಲವು |
ಅರಸು ಸುರಥಗಿದಿರು ಮೂರು ಧರೆಯೊಳಿಲ್ಲವು ||
ವರಸುಧನ್ವನವನ ಕಿರಿಯ | ತರಳನಿರವನು |
ಪರಿಕಿಸೆನುತಲೆಚ್ಚನೊಡನೆ | ಭರಿತ ಶರವನು || ೩ || 231 ||

**ಮಾರವಿ - ಏಕ**

ಬರುವ ಶರೌಘವ | ತರಿಯುತ ಪುಷ್ಕಳ |
ಸುರಿಸುತ ಮಾರ್ಗಣವ ||
ಅರುಹಿದ ತಂದೆಯ | ಕರಸಿಕೊ ನೀನನು |
ಸರಿಸದೆ ಸುರಗಣವ || ೧ ||

ತಂದೆಯ ಕರೆಯಿಸ | ಲೆಂದೆಯ ಎಲಎಲ |
ಹಂದೆಯೆ ನೋಡೀಗ ||
ಕಂದನ ಕೈಗುಣ| ವೆಂದೆನುತುರುಶರ |
ದಿಂದೆಸೆಯಲಿಕಾಗ || ೨ ||

ಮುರಿದದ ಪುಷ್ಕಳ | ನುರುದಿವ್ಯಾಸ್ತ್ರವ |
ವಿರಿಸುತ ಶಿಂಜಿನಿಗೆ ||
ತ್ವರಿತದಿ ಬಿಡಲದ | ರುರುಬೆಗೆ ಸುರಥಜ |
ನುರುಳಿದ ಮೇದಿನಿಗೆ || ೩ || 234 |

**ಭಾಮಿನಿ**

ಅನಿತಕೆಚ್ಚತ್ತಾ ಸುದರ್ಶನ |
ಧನುವನೊದರಿಸುತೆದ್ದು ರೋಷದಿ |
ಕಣುಗಳಲಿ ಕಿಡಿಗೆಡಹಿ ಮಾಂಡವಿಯಣುಗಗಿಂತೆಂದ ||
ಕ್ಷಣದಿ ನಿನ್ನನು ಮಡುಹದಿರ್ದಡೆ |
ಜನಕಜನನಿಯರಿಂಗೆ ತನಯನೆ |
ಬಿನುಗೆ ತಾಳೆಂದೆಚ್ಚ ನಾರಾಯಣ ಮಹಾಸ್ತ್ರದಲಿ || ೧ || 235 ||

**ಕಂದ**

ಆ ಮಹಾಶರದತ್ಯುರುಬೆಗೆ |
ಮೈಮರೆದುರುಳಿದ ಭರತಜ ರಾಮಾವರಜಂ ||
ಆ ಮಗನಂ ಬಿಗಿದಪ್ಪುತ |
ಪ್ರೇಮದಿ ಮಲಗಿಸಿ ತೊಡೆಯೊಳು ತಾ ಮರುಗುತ್ತಂ || ೧ || 236 ||

**ಸಾವೇರಿ – ಝಂಪೆ** (ಭೈರವಿ - ಝಂಪೆ)

ಮಗನೇ ನೀ ಮುನಿದಿಂತು | ಜಗತಿಯಲಿ ಮಲಗುವುದೆ |
ಸುಗುಣ ಸವಿ ಮಾತಾಡು ನಗುತೊಮ್ಮೆ ನೋಡು || ೧ ||

ಕುಲಕೆ ನಂದಾದೀಪ | ಛಲಕೆ ಮೇರುಸ್ವರೂಪ |
ಬಲಕೆ ಬಲ್ಲಿದ ಭೂಪ | ಸತಿ ಸುಪ್ರತಾಪ || ೨ ||

ಸುಗುಣ ಸುಂದರನಿಂತು | ಅಗಲಿ ಬಾಳ್ವನದೆಂತು |
ನಗರಕೈದುವೆನೆಂತು | ಮೊಗದೋರ್ಪೆನೆಂತು || ೩ || 239 ||

**ಭಾಮಿನಿ**
ಇನಿತು ನಾನಾ ತೆರದಿ ಚಿಂತಿಸು |
ವನನು ಕಂಡಲ್ಲಿಗೆ ಸುದರ್ಶನ |
ಘನದ ಗರ್ಜನೆಯಿಂದ ಬಂದೊರೆದನು ಪಚಾರಿಸುತ ||
ವನಿತೆಯರಿಗಿದು ಸಹಜ ಬಾಹುಜ |
ರಣಕಳುಕಿ ಮರುಗುವನೆ ತೆಗೆತೆಗೆ |
ವನಜನಾಭನ ಬರಿಸು ಸೆಣಸಿದು ನಿನಗೆ ತಗದೆಂದ || ೧ || 240 ||

**ಸೌರಾಷ್ಟ್ರ - ತ್ರಿವುಡೆ**
ನುಡಿಗೆ ಕಿಡಿಕಿಡಿಯಾಗಿ ಶತ್ರುಹ |
ನೊಡನೆ ಧನುಗೊಂಡೆಂದ ನಿನ್ನನು |
ಮಡುಹೆ ಚಿನುಮಯ ಬೇಕೆ ನಿಲ್ ನಿ | ಲ್ಲಡಿ ಮಿಡುಕದೆ || ೧ ||

ತಂದೆಯನು ಬರಹೇಳು ಮಿಗೆ ತ |
ಮ್ಮಂದಿರನು ಬೆಂಬಲಕೆ ಕರೆಸಿಕೊ |
ಕೊಂದು ಬಿಸುಡುವೆನೆನುತೆಸೆದ ಶರ | ವೃಂದವನ್ನು || ೨ ||

ಮುರಿಯುತವಿಯನು ತರಿಯೆ ಸಿಂಹನ |
ಬರಿಸಲೇಕೆಂದುರು ಮಹಾಸ್ತ್ರದೊ |
ಳೆರಗೆ ಶತ್ರುಹನೊರಗೆ ನೃಪಸುತ | ಜರೆಯುತೆಂದ || ೩ || 243 ||

**ನವರೋಜು - ಏಕ**
ಭಳಿರೆ ಶತ್ರುಹ ಧೀರ | ರಣ |
ಕಲಿಯಹೆ ಭಾಪುರೆ ವೀರ ||
ಹುಲುಗಳು ನಾವ್ ಬಲು | ಬಲಿ ನೀನಶ್ವವ |
ಚಳಕದಿ ಬಿಡಿಸಿದೆ | ಗೆಲಿದೆನ್ನನುವರ || ಭಳಿರೆ || ೧ ||

ಕರೆಸಿಕೊ ರಾಮನನೆಂದು | ನಾ |
ನೊರೆದರು ಕಾದಲು ನಿಂದು ||
ಧರೆಯೊಳು ತನಗಿದಿ | ರಿರರೆಂಬುವ ತುದಿ |
ಗರುವವು ಮುರಿದುದು | ಬಿರುದದು ಹರಿದುದು || ಭಳಿರೆ || ೨ ||

ಇನ್ನಾದರಚ್ಯುತನ | ಕರೆ |
ಸೆನ್ನುವೆ ನೀ ಹುಚ್ಚುತನ ||
ನಿನ್ನಿಂದಸದಳ ವೆಣ್ಣೊಲಿಕನುವರ |
ಚಿನ್ಮಯನೈತರು | ವನ್ನೆಗು ಬಿಡೆ ಕಣಾ || ಭಳಿರೆ || ೩ || 246 ||

**ಭಾಮಿನಿ**
ಕೇಳುತೀ ಮೂದಲೆಯನಾಶುಗ |
ಬಾಲ ಕಂಡಡಹಾಯ್ದು ಕಲ್ಪದ |
ಕಾಲರುದ್ರನ ರೌದ್ರದಿಂದ ನೃಪಾಲಸುತಗೆಂದ ||
ಖೂಳ ನಿಲ್ಲೆಲವೆಲವೊ ನಿನ್ನಯ |
ಭಾಳಲಿಪಿಯನು ತೊಡೆವೆನೊಮ್ಮೆಗೆ |
ತಾಳೆನುತ ತೆಗೆದಿಟ್ಟನೆದೆಗಾಭೀಳ ಮುಷ್ಟಿಯಲಿ || ೧ || 247 ||

**ವಾರ್ಧಕ**
ಭಾರಿ ಹತಿಗೊಡೆದು ಕೆನ್ನೀರು ಕಾರಂಜಿಯೆನೆ |
ಹಾರಿತೆದೆಯಿಂದ ಮೇಲೇರಿ ನಾಸಿಕ ಮುಖದಿ |
ಧಾರಿಣಿಪಸುತ ರುಧಿರ ವಾರಿಯೊಳ್ ದಿಂಡುರುಳೆ ಸಾರಿ ಮೂರ್ಛಾವಸ್ಥೆಗೆ ||
ಭೂರಿಬಲರಿವನನುಜರೀ ಹರಿಬಕೊದಗಿ ಕಡು |
ವೀರ ಹನುಮನ ತುಡುಕಲೋರಂತೆ ಕೆಡಹಿ ಬಲ |
ವಾರಿಧಿಯ ಬರಿಗೈದ ಚಾರನೋರ್ವಂ ತೆರಳಿ ಸಾರಿದಂ ಸುರಧೇಂದ್ರಗೆ || ೧ || 248 ||

**ಭಾಮಿನಿ**
ಸುತರ ರಣ ಮಂಡಲದಿ ಕೆಡಹಿದ |
ಹತಕರಾಯುವ ತೊಡೆಯದಿರೆನೆಂ |
ದತಿ ಮಹಾರೋಷದಲಿ ಪೊರಟನು ವಿತತ ಬಲದೊಡನೆ ||
ವ್ಯಥಿಸುತಲಿ ನಡೆತಂದು ಸಂಗರ |
ಪೃಥಿವಿಯಲಿ ಮೈಮರೆದು ಬಿದ್ದ |
ಪ್ರತಿಮ ಪುತ್ರನನಪ್ಪಿ ಮುದ್ದಿಸಿ ಕ್ಷಿತಿಪ ಹಮ್ಮೈಸಿ || ೧ || 249 ||

**ನೀಲಾಂಬರಿ - ಆದಿ**
ಏಳು ಏಳೈ ಮುದ್ದು ಬಾಲಕ | ಏನಾಯಿತೆಂದು |
ಹೇಳು ಹೇಳೈ ಧರ್ಮಚಾಲಕ ||
ಬಾಳು ಬಾಳೈ ಕಾಮರೂಪಕ | ಮುನಿಸೇಕೆ ಕ್ಷಮೆ |
ತಾಳು ತಾಳೈ ಕುಲದೀಪಕ || ೧ ||

ಕಂದ ಬಾರೆನುತಿನ್ನು ಕರೆವೆನೆ | ಈ ಮುದ್ದು ಮುಖವ |
ಮಂದ ಭಾಗ್ಯನದೊಂದೂ ಮರೆವೆನೆ ||
ಸಂದ ಮಾನವನಾಗಿ ಮರೆವೆನೆ | ಶ್ರೀ ರಘುರಾಮ |
ಚಂದಿರನುತ್ತುಂಗಪಾದ ನೆರೆವೆನೆ || ೨ ||

ಯಾಕೆ ಕಟ್ಟಿದೆ ಮುಖವಾಜಿಯ | ನಿರ್ಭಾಗ್ಯ ಬರಿ |
ದೇಕೆ ಹಮ್ಮಿದೆ ಮಹದಾಜಿಯ ||
ನೂಕಿಕಳೆದ ಪುತ್ರ ರಾಜಿಯ | ಸಾಕಿನ್ನು ಬಾಳ |
ಲೇಕೆ ಕುಂದಿಸಿ ಕೀರ್ತಿ ವೀಚಿಯ || ಏಳು || ೩ || 252 ||

**ಸೌರಾಷ್ಟ್ರ - ತ್ರಿವುಡೆ**
ಎಂದು ಮರುಗುವ ಸಮಯಕಲ್ಲಿಗೆ |
ಬಂದು ಶತ್ರುಹನೆಂದ ನಗುತಲಿ |
ಸಂದ ಸುತರೈತಹರೆ ಚಿಂತಿಸ | ದಿಂದು ನೀನು || ೧ ||

ಸಂಧಿಗೊಲಿದೆನ್ನಯ ಮಖಾಶ್ವವ |
ತಂದು ಕೊಡು ಕಾಣಿಕೆಯು ಸಹಿತಲಿ |
ಮುಂದೆ ಸುಖವಹುದಳುಕದೆದ್ವೀ | ಳೆಂದನಾಗ || ೨ ||

ಬತ್ತಿದುದು ಶೋಕಾಗ್ನಿ ಕಾರ್ಬೊಗೆ |
ಹೊತ್ತಿ ಕಮರಿದುದುರದಿ ವಿಲಯದ |
ಮೃತ್ಯುವೆನಲುರಿದೆದ್ದು ನೃಪವರ | ಶತ್ರುಹಂಗೆ || ೩ ||

ಚುಚ್ಚು ನುಡಿಗಳ ಮುಚ್ಚುಯನ್ನಯ |
ಚೊಚ್ಚಲಣುಗನ ನೆಚ್ಚು ಕೆಡೆದಿಹ |
ತುಚ್ಛರನಿಬರ ಕೊಚ್ಚದಳಿವುದೆ | ಕಿಚ್ಚು ತನಗೆ || ೪ ||

ಸಂಧಿಯೇ ತನಗಿನ್ನು ಮರಣದ |
ಸಂಧಿ ನಿನಗೆಂದೆನುತ ರೌದ್ರದಿ |
ಸಂಧಿಸಿದನುರಿ ಶರವನುಲಿದು ವ | ಸುಂಧರೇಶ || ೫ || 257 ||

**ಭಾಮಿನಿ**
ಬಾಣಹತಿಯಲಿ ಮೈಮರೆದು ಗೀ |
ರ್ವಾಣ ವಂದಿತನನುಜನುರುಳಲು |
ದಾನವೇಂದ್ರ ವಿಭೀಷಣನು ರಿಪು ತಾಣ ಭೀಷಣನು ||
ತಾನರಿತನಿದ ಲಂಕೆಯಲಿ ಸು |
ತ್ರಾಣ ಕೌಣಪ ಬಲವ ಕೂಡುತ |
ಭಾನು ಮಾರ್ಗದಿ ಬಂದೆರಗಿ ರಾಮಾನುಜನ ಪದಕೆ || ೧ || 258 ||

**ಭೈರವಿ - ಏಕ**
ಕೊಡು ನೇಮವ ಶತ್ರುಘ್ನ | ಜಗ |
ದೊಡೆಯನ ಕಾರ್ಯಕೆ ವಿಘ್ನ ||
ಅಡಚಿದ ದುರುಳನ ಭಗ್ನ | ಗೈ |
ದಿಡದಿರೆ ನಾನು ಕೃತಘ್ನ || ೧ ||

ಜಲಜದಳಾಕ್ಷನ ಕರುಣ | ಇರ |
ಲಿಳೆಯೊಳಗೆನಗಾರ್ಗಣ್ಯ ||
ಕಲಹಕೆ ಬರೆ ಮುಕ್ಕಣ್ಣ | ಬಿಡೆ |
ಖಳನಿಗೆ ಮುಕ್ಕಿಪೆ ಮಣ್ಣ || ೨ ||

ಬಿಡು ಚಿಂತೆಯನೆಂದೆನುತ | ಶಿರ |
ವಿಡೆ ಪದದಲಿ ರಘುಜಾತ ||
ಕೊಡಲಪ್ಪಣೆ ಪಡೆ ಸಹಿತ | ನಡೆ |
ದೊಡನೆಂದನು ಗರ್ಜಿಸುತ || ೩ || 261 ||

**ಭೈರವಿ - ಅಷ್ಟ**
ನೊರಜು ನೃಪಾಲ ಕೇಳು | ಪಾಮರ ನಿನ್ನ |
ಮರುಳಾಟವಿದು ಸಾಕೇಳು ||
ವರ ರಾಮಚಂದ್ರನ | ಧ್ವರದ ವಾಜಿಯ ಬಿಟ್ಟು |
ಮರೆಹೊಕ್ಕು ಬದುಕೀಗಳು || ೧ ||

ಮರುಳ ನೀನಾವನು | ಹಂಸಕೆ ಕ್ಷೀರ |
ದಿರವ ಬೋಧಿಸುವವನು ||
ವರರಾಮ ಹೃದಯ ಮಂ | ದಿರದೊಳಿರಲು ಮಿಕ್ಕ |
ನೊರಜಿಗಂಜುವೆನೆ ನಾನು || ೨ ||

ತಿಳಿದು ತಿಳಿದು ಹರಿಯ | ಕಾರ್ಯಕೆ ವಿಘ್ನ |
ಗೊಳಿಪೆಯ ಭಜಕವರ್ಯ ||
ಛಲವೆನಿತಿರಲದ ನಿಲಿಸುವೆ ನಾ ಲಂಕಾ |
ತಿಲಕನಾಗಿರುವೆನಯ್ಯ || ೩ ||

ವಸುಧೆಯ ಲೋಭದಿಂದ | ದ್ವೇಷಿಸುತಣ್ಣ |
ನಸುಗೊಂಡುಜ್ಜುಗದಿ ಬಂದ ||
ವಿಷಮ ಸಂಪದದಿಂದ ಬಸುರ ಹೊರೆವ ನೀಚ |
ಪಿಸುಣ ಬಗುಳದಿರೆಂದ || ೪ ||

ಜಲಜನಾಭನ ಸತಿಯ | ಕದ್ದಾ ದಶ |
ಗಳನು ಹೊಂದಿದ ಮೃತಿಯ ||
ಖಳನೀನಾತನ ಹಯಕಳುಪಿ ಸಾಯುವೆಯೆಂದು |
ಇಳುಹಿದ ಶರವೃಷ್ಟಿಯ || ೫ || 266 ||

**ಭಾಮಿನಿ**
ಸುರಥ ಲಂಕಾನಾಥಾರದುಭುತ |
ಧುರವೆಸಗುತರೆಯಾಮ ಕಡೆಯಲಿ |
ಉರುವ ಶಕ್ತಿಯ ಹತಿಯೊಳುರುಳಿದ ಸರಮೆಯೊಲ್ಲಭನು ||
ಮರಳಿ ಶತ್ರುಹ ಸಮರಕೊದಗಲು |
ಸೆರೆಯ ಪಿಡಿದನು ನೃಪತಿ ಕಂಡಿದ |
ಭರಿತ ರೌದ್ರದೊಳಂಜನಾಸುತ ತರುಬಿ ಗರ್ಜಿಸುತ || ೧ || 267 ||

**ನಾದನಾಮಕ್ರಿಯೆ - ಅಷ್ಟ**
ಎಲವೊ ಭೂಪಾಲ ಸಂಗರದೊಳು | ಎಮ್ಮ |
ಬಲವ ಗೆಲಿದ ಹಮ್ಮ ಕ್ಷಣದೊಳು ||
ಇಳಿಸದಿದ್ದರೆ ಕಲಿ ಹನುಮನೆ | ಕೊಟ್ಟು |
ತಲೆಯುಳುಹಿಕೊ ಎಮ್ಮ ಹಯವನೆ || ೧ ||

ಆಟವಿಚರ ಗೆಲುವೆಯ ಎನ್ನ | ತೆಗೆ |
ಲೂಟಿಯಲ್ಲಿದು ಕಬ್ಬು ಕದಳಿಯ ||
ತೋಟವನರಸು ನಿನ್ನಂತರ | ಕೋಟಿ |
ಕೋಟಿಯ ತರಿವುದೆಮ್ಮಯ ಶರ || ೨ ||

ವನಲೂಟಿಯ ಗೈದು ಲಂಕೆಯ | ರಾ |
ವಣತನುಜಾದಿಯಸಂಖ್ಯೆಯ ||
ರಣಪರಾಕ್ರಮರ ನಿಗ್ರಹಿಸಿದ | ಕೈ |
ಗುಣವದನರಿಯೆ ನೀ ಗ್ರಹಿಸಿದ || ೩ ||

ಎನುತಲಿ ಮರವೊಂದ ಮುರಿಯುತ್ತ | ಎತ್ತಿ |
ಕನಲಿ ಭೂಮೀಶನ ಶಿರಕಿಟ್ಟ ||
ಜನಪತಿ ಕೆರಳಿ ಕೃಪಾಣದಿ | ಅದ |
ಕ್ಷಣದಿ ಖಂಡಿಸುತ ಸುತ್ರಾಣದಿ || ೪ ||

ಮರುಳುವಾನರ ಎಮ್ಮ ಧುರದೊಳು | ಗೆಲ |
ಲರಿದು ಶ್ರೀ ರಾಮನ ಭರದೊಳು ||
ಕರೆಸಿಕೊಂಬುದು ಬದುಕಿರುವಾಶಾ | ಇಲ್ಲ |
ದಿರೆ ಸೆಣಸೆನುತೆಚ್ಚನವನೀಶ || ೫ || 272 ||

**ಕಾಂಭೋದಿ - ಝಂಪೆ**
ತೃಣವನರಿಯಲು ಕೊಡಲಿ | ಯನು ಬಳಸಲ್ಯಾಕೆ ಬಿಡ |
ಜುಣುಗೊಂದ ಹೊಸಕುವುಜ್ಜುಗಕೆ ||
ಚಿನುಮಯಾತ್ಮಕ ತಾನೆ ಬರಬೇಕೆ ನಿಜಶರಣ |
ಹನುಮಗಿದಿರ್ಯಾರುಂಟು ಜಗದಿ || ೧ ||

ಭಕ್ತಿಯೋರ್ವನಿಗಲ್ಲಾರ್ ಹೊತ್ತ ಗುತ್ತಿಗೆಯಲ್ಲ |
ಶಕ್ತಿಯೆಲ್ಲಿಯು ಮಾರಲಿಲ್ಲ ||
ಮುಕ್ತಿದಾಯಕ ರಾಮ | ಭಕ್ತರಲಿ ನಾನೋರ್ವ |
ವ್ಯಕ್ತಿಯಿರಲಿಡೆ ಕಲಿಯ ಸೊಲ್ಲ || ೨ ||

ಗಳಹಿ ಫಲವೇನನಿತು | ಬಲವಿರಲು ಮಾರ್ಮಲೆತು |
ಬಲುಹತೋರೆಂದ ಗರ್ಜಿಸುತ ||
ಕಲಿಹನುಮ ನೆಗೆದದ್ರಿ | ಯಲಿ ಹೊಡೆಯೆ ಸುರಥಾಖ್ಯ |
ಚಳಕದಿಂದದರ ಖಂಡಿಸುತ || ೩ || 275 ||

**ಶಂಕರಾಭರಣ - ಮಟ್ಟೆ**
ಮರುಳು ಕಪಿಯೆ ನಮ್ಮ ಸಮರ | ಸರಳವಲ್ಲ ಸಾರಿ ಪೇಳ್ದೆ |
ಹರಣದಾಸೆಯಿರಲು ಕರೆಸು | ರಾಮಚಂದ್ರನ ||
ಅರರೆ ರಾಮಭಕ್ತನೆಂದು | ಸೊರಹುತವನ ಕಾರ್ಯಕೆಡರ |
ತರುವ ದ್ರೋಹಿಗ್ಯಾಕೆ ನೆನಹು | ರಾಘವೇಂದ್ರನ || ೧ ||

ಭಕ್ತರಾದವರ ಸಹಜ | ಶಕ್ತಿ ಮೆರಸಬಾರದೆಂಬ |
ಉಕ್ತಿಯಿಹುದೆ ವರ್ಣ ಧರ್ಮ | ಯುಕ್ತ ಮಾರ್ಗದಿ ||
ಶಕ್ತಿ ಮೆರೆಸುವುದಕೆ ಯುಕ್ತಾ | ಯುಕ್ತವೆಂಬುದಿರುವುದತುಲ |
ಶಕ್ತರೆಮ್ಮೊಳಿವೆ ದಿಟ ಪ್ರ | ಸಕ್ತ ಯುದ್ಧದಿ || ೨ || 277 ||

**ಭಾಮಿನಿ**
ಎನುತ ಹೆಬ್ಬಂಡೆಯಲಿ ರಾಯನ |
ಘನರಥವನಪ್ಪಳಿಸಿದನು ನೃಪ |
ಜುಣುಗಿ ಕಲ್ಪದ ಕಡಲ ತೆರೆಯೆನೆ ಕಣೆಯ ಮಳೆಗರೆದ ||
ಕ್ಷಣದಿ ಮಾರುತಿ ಮುರಿದ ಖತಿಯಲಿ |
ಜನಪ ಹರಿವಿಧಿಯೈಂದ್ರ ರೌದ್ರಾ |
ದ್ಯನಿತು ಶಕ್ತಿಯೊಳಿಡಲು ಗೆಲಿದನು ಹನುಮ ಭುಜಬಲದಿ || ೧ || 278 ||

**ಸೌರಾಷ್ಟ್ರ - ತ್ರಿವುಡೆ**
ಕಂಡು ಕಿಡಿಕಿಡಿಯಾಗಿ ಕುಂಡಲ |
ಮಂಡಲಾಧಿಪನುಗಿದು ಭುವನೋ |
ದ್ದಂಡ ರಾಘವ ನಾಮಮುದ್ರಿತ | ಚಂಡಶರವ || ೧ ||

ಅಜಯ ಕೇಳೀ ಶರದಿ ನಿನ್ನನು |
ವಿಜಯ ಪೊಂದದಡಾನು ಸತ್ಯದಿ ||
ತ್ರಿಜಗವಂದಿತ ರಾಮಚಂದ್ರನ | ಭಜಕನಲ್ಲ || ೨ ||

ಮುರಿದರಗ್ಗಳ ನೀನೆನುತಲಿಡೆ |
ಧರಣಿ ಕಂಪಿಸಿತಾಮಹಾಸ್ತ್ರದಿ |
ಮಿರುಗುತಿಹ ಶ್ರೀರಾಮ ನಾಮ | ಕ್ಷರವ ಕಂಡು || ೩ ||

ಕರವ ಜೋಡಿಸುತೆರಗಿ ಮಾರುತಿ |
ಧರಣಿಜಾಪತಿ ವಿಶ್ವಮೂರುತಿ |
ಶರಣು ಶರಣೆನುತಾ ಮಹಾಸ್ತ್ರವ | ನುರದಿ ಧರಿಸಿ || ೪ ||

ರಾಮರಾಮಾಯೆನುತ ಮೈಮರೆ |
ದಾಮರುತ್ಸುತನುರುಳಲಖಿಲರ |
ತಾ ಮುದದಿ ಸಾಗಿಸುತಲಿರೆ ಸೆರೆ | ಗೀಮಹೀಶ || ೫ || 283 ||

**ಭಾಮಿನಿ**
ಅತ್ತ ಸರಯೂ ತಟದಿ ಮುನಿಜನ |
ಮೊತ್ತದೊಡನೆಸೆದಿರ್ದ ಮನುಕುಲ |
ಸತ್ತಮಗೆ ಗುರು ನುಡಿದನರಿತೀ ವರ್ತಮಾನವನು ||
ಮತ್ತೆ ಧನಪ ವಿಮಾನವೈತರೆ |
ಮತ್ತದರ ತಾನಡರಿ ಕುಂಡಲ |
ಪೃಥ್ವಿಗಿಳಿದನು ರಘುಜನರ್ಬುದ ಮಿತ್ರ ತೇಜದಲಿ || ೧ || 284 ||

**ಶಂಕರಾಭರಣ - ಅಷ್ಟ**
ಕಂಡನು | ಕುಂಡಲೇಂದ್ರ ರಾಘವನನು | ಕಂಡನು || ಪ ||
ಕಂಡ ಸುರಥ ರಘುವರನ | ಕೋ |
ದಂಡಹಸ್ತನ ಪೀತಾಂಬರನ | ದೇವ |
ತಂಡವಂದಿತ ದಾಮೋದರನ || ಬ್ರ |
ಹ್ಮಾಂಡನಾಯಕ ವಿಶ್ವಂಭರನ || ಮಾ |
ರ್ತಾಂಡ ಕೋಟಿಪ್ರಭಾ | ಮಂಡಲ ವಲಯನ |
ರುಂಡಮಾಲನ ಸಖ | ಪುಂಡರೀಕಾಕ್ಷನ || ಕಂಡನು || ೧ ||

ಓ ರಾಮ ಕೌಸಲ್ಯ ಬಾಲ | ಸೀ |
ತಾ ರಾಮ ದಶಶಿರಕಾಲ | ಕುಜ |
ನಾರಾಮಶಿಖಿ ವನಮಾಲ | ಜಯ |
ಶ್ರೀರಾಮ ಸಜ್ಜನಪಾಲ || ಎಂದು |
ಮಾಮನೋನಿಲಯ ಸು | ತ್ರಾಮ ವಂದಿತ ಪಾದ |
ತಾಮರಸ ದ್ವಂದ್ವ | ಕಾ ಮಹೀಪತಿ ಬಿದ್ದ || ಕಂಡನು || ೨ ||

ಕರವ ಪಿಡಿದು ಹರ್ಷೋತ್ಕರದಿ | ರಘು |
ವರನನು ರತ್ನ ವಿಷ್ಟರದಿ || ಕು |
ಳ್ಳಿರಿಸಿ ಪೂಜಿಸಿ ಭಕ್ತಿ ಭರದಿ | ಈಂಟಿ |
ಚರಣತೀರ್ಥವ ಶ್ರದ್ಧಾತುರದಿ || ದಿವ್ಯ |
ದರುಶನಕೆನುತಲುತ್ತರಿಸಿತೆರಡು ಯುಗ |
ಬರಿಸಿತಿಂದಿಗೆ ಯೋಗ | ಪರಿಕಿಪೆ ಪದಯುಗ || ಕಂಡನು || ೩ ||

ಧನ್ಯ ಧನ್ಯನು ಸ್ವಾಮಿ ನಾನು | ಮಿಗೆ |
ಧನ್ಯರು ಪಿತೃಗಳಿನ್ನೇನು | ಕಂಡು |
ಧನ್ಯವು ಕುಲಕೋಟಿ ತಾನು | ಮಹಾ |
ಧನ್ಯ ಪ್ರಜಾವರ್ಗವಿನ್ನು ||
ಧನ್ಯವಾಯಿತು ಬಾಳು ಧನ್ಯವಾಯಿತು ಬೀಳು |
ಧನ್ಯವಖಿಲವೆಂದು ಧನ್ಯಪಾದವನಪ್ಪಿ || ಕಂಡನು || ೪ ||

ಚರಣ ಸಂದರ್ಶನಕಾಗಿ | ಯಜ್ಞ |
ಹರಿಯ ಕಟ್ಟಿದೆ ಹೊರತಾಗಿ || ವೈರ |
ವಿರದು ಶತ್ರುಹಗೆ ಲೇಸಾಗಿ | ನಿನ್ನ |
ಕರೆಸೆಂದಡವ ಬಿರುಸಾಗಿ | ತಿರ |
ಸ್ಕರಿಸಿದನದರಿಂದ | ಧುರದೊಳನಾಹುತ ||
ಜರುಗಿತಾದರು ದೋಷ | ವಿರೆ ಮನ್ನಿಸುವುದೆಂದು || ಕಂಡನು || ೫ || 289 ||

**ಭಾಮಿನಿ**

ಎನುತ ಬಂಧಿತ ಭಟರ ವಾರುವ |
ವನು ತರಿಸಿ ಕಾಣಿಕೆಗೆ ತನಗಿ |
ದ್ದನಿತು ಸಂಪದ ಸಹಿತ ಮೇಣೊಡೆತನದ ಮುದ್ರಿಕೆಯ ||
ಚಿನುಮಯಾತ್ಮಕನಡಿಯೊಳರ್ಪಿಸಿ |
ಮಣಿದು ಪೇಳಿದ ದೇವ ತವ ಪದ |
ವನಜ ಸೇವಾ ಭಾಗ್ಯವನು ತನಗನುಗ್ರಹಿಪುದೆಂದು || ೧ || 290 ||

**ಕಂದ**

ಇಂತಡಿಗುರುಳಿದು ನುತಿಪನ |
ತಾಂ ತಳುವದೆ ತೆಗೆದೆತ್ತಿ ಮಹಾಂತಕರುಣದಿಂ ||
ಸಂತಸದಿಂ ಮೈದಡವುತ |
ಕಂತುವಿನಯ್ಯಂ ನಸು ನಗುತಿಂತವಗೆಂದಂ || ೧ || 291 ||

**ಸಾವೇರಿ - ಆದಿ**

ಅಹಹಾ ಮೆಚ್ಚಿದೆ ಸ್ತುತಿಗೆ | ಭೂಪತಿ ವಹ |
ವಹವ ಹೆಚ್ಚಿನ ಕೃತಿಗೆ || ಪ ||
ಅಹಹ ನಿನ್ನಯ ಭಕ್ತಿ | ಮಹಿಯೊಳಗ್ಗಳ ಶಕ್ತಿ ||
ಸಹನ ಸದ್ಗುಣಗಣ | ಮಹಿಮೆಗಾನೀ ದಿನ | ಅಹಹ || ಅ.ಪ. ||
ಭೋಗಭಾಗ್ಯೋತ್ಕರದ | ರಾಗದ್ವೇಷ |
ದಾಗಾರ ಸಂಸಾರದ ||
ಸಾಗರದೊಳಗಿರು | ವಾಗಲೂ ಭವದೀಯ ||
ನೀಗಿದೊಳ್ಳಿದ ಧ್ಯಾನ | ಯೋಗಿಯಾಗಿಹೆಯಯ್ಯ || ಅಹಹ || ೧ ||

ನಿರತ ಧ್ಯಾನದ ಬಲದಿ | ಆದರ್ಶನಾದೆ |
ಧರೆಗಾ ಪುಣ್ಯದ ಫಲದಿ ||
ವರಹರಿ ಸಾಯುಜ್ಯ | ಪರತರ ಪದವಿಗೆ |
ತೆರಳುವೆ ಲೇಸಾಗಿ | ಪರಿವಾರಸಹಿತಾಗಿ || ಅಹಹ || ೨ ||

ಮರಳಿಸಿದೆನು ನಿನ್ನಯ | ರಾಜ್ಯವ ಪಿರಿ |
ತರಳಗೀಯುತಲೆನ್ನಯ ||
ತುರಗದ ಜೊತೆಯಲಿ | ಪರಿವಾರ ಸಹಿತಲಿ |
ತ್ವರಿತದಿ ಬಹುದೆಂದು | ವರರಘೂದ್ವಹನಂದು || ಅಹಹ || ३ || 294 ||

**ಭಾಮಿನಿ**
ಕರೆದು ಶತ್ರುಹಮುಖ್ಯರನು ಸ |
ತ್ಕರುಣದಿಂ ಮನ್ನಿಸಿ ರಘೂದ್ವಹ |
ಪೊರಟನಿತ್ತಲು ಸುರಥನೃಪನಾ ಭರತನವರಜನ ||
ಹರುಷಮಿಗಿಲುಪಚರಿಸಿ ಪಟ್ಟವ |
ವರಸುದರ್ಶನಗಿತ್ತು ತನ್ನಯ |
ಭರಿತಸೇನಾಜಾಲ ಸಹ ಜೊತೆವೆರೆಯೆ ರಿಪುಹರನು || ೧ || 295 ||

**ವಾರ್ಧಕ**
ಪಡುವಣರಸರ ಗೆಲಿದು ಪಡೆಸಹಿತಲುತ್ತರಕೆ |
ನಡೆಯೆ ಗಂಗಾತಟದಿ ಪೊಡವಿಜಾನಂದನರ್ |
ತಡೆದು ವಾಜಿಯಬಲವ ಕೆಡಹೆ ರಾಘವನೈದಿ ಮಡದಿಸಹಿತಾತ್ಮಜರನು ||
ಒಡಗೂಡಿ ಯಜ್ಞಮಂ ಕಡೆಗಾಣಿಸಿದ ಸುರಥ |
ಪೊಡವಿಪತಿ ಕೈವಲ್ಯಕಡರಿದಂ ಈ ಕಥೆಯ |
ನುಡಿದ ಕೇಳಿದರಿಂಗೆ ಜಡಜಾಕ್ಷ ಸದ್ಗತಿಯ | ಕೊಡುವನೆಂದಂ ಫಣಿಪನು || ೧ || 296 ||

**ಸೌರಾಷ್ಟ್ರ - ತ್ರಿವುಡೆ**
ಇಳೆಗಧಿಕ ಗೋಕರ್ಣ ಮಹ ಮಂ |
ಡಲದ ಸಿದ್ದಾಪುರದೊಳಿಹವೂರ್ |
ಬೆಳಸಲಿಗೆ ಗಣನಾಥಬುಧ ವಿ | ಠ್ಠಲ ತನಯನು || ೧ ||

ಎಸೆವ ಶಾಲಿವಹಾಬ್ದವರ್ಷಾ |
ದಶಶತಕದೇಕಾಧಿಕಾಶೀತಿ |
ಎಸೆವತಿಥಿ ಶ್ರೀರಾಮ ನವಮಿಗೆ | ಬೆಸುಗೆಯಾಗಿ || ೨ ||

ರಚಿತ ದ್ವಿವರ್ದ್ವಯ ಕೃತಿಯು ವಿದ್ವ |
ಗ್ನಿಚಯ ತಪ್ಪಿರೆ ತಿದ್ದಿ ಲೋಕದಿ |
ಪ್ರಚುರಪಡಿಸುವುದೆನುತ ನಂಬಿಹೆ | ನಚಲ ಮನದಿ || ३ || 299 ||

**ಮಂಗಲಪದ**
**ಧವಳಾರ - ಏಕ**
ಮಂಗಲಂ | ಶುಭ | ಮಂಗಲಂ | ನಿತ್ಯ || ಪ ||
ಮಂಗಲ ಕೌಸಲ್ಯಾಸುತಗೆ |
ಮಂಗಲ ಮುನಿಕ್ರತು ಪೋಷಕಗೆ |
ಮಂಗಲ ಕಾರ್ಮುಕ ಭಂಜಕಗವನಿಯ |
ನಂದನೆಯಾಳಿದ ರಾಘವನಿಗೆ || ಮಂಗಲಂ || ೧ ||

ಮಂಗಲ ವನಸಂಚಾರನಿಗೆ |
ಮಂಗಲಮಯ ಬಿಡುದಾರನಿಗೆ |
ಮಂಗಲ ದೈತ್ಯವಿರಾಮಗೆ ಜಯ ಜಯ |
ಮಂಗಲ ದಶರಥ ರಾಮನಿಗೆ | ಮಂಗಲ || ೨ ||

ಮಂಗಲ ವಿಘ್ನವಿದಾರಕಗೆ |
ಮಂಗಲ ಸುಜನೋದ್ಧಾರಕಗೆ |
ಮಂಗಲ ಕಪಿಲಪುರೇಶಗೆ ಜಯ | ಜಯ
ಮಂಗಲಮೂರ್ತಿ ಗಣೇಶನಿಗೆ || ಮಂಗಲಂ || ೩ || 302 ||

**** ಶುಭಂ ****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ನಿರೀಕ್ಷಿಸಲಾಗಿದೆ

**ಮೂಲ ಪ್ರಕಾಶಕರು:** ದಿ. ಬೆಳಸಲಿಗೆ ಗಣಪತಿ ಹೆಗಡೆ ಕೃತಿ ಪ್ರಕಾಶನ, ಸಿದ್ದಾಪುರ – ೧೯೯೯

**ಪ್ರಸಂಗ ಪ್ರತಿ ಆಧಾರ:** ದಿ. ಬೆಳಸಲಿಗೆ ಗಣಪತಿ ಹೆಗಡೆ ಕೃತಿ ಪ್ರಕಾಶನ, ಸಿದ್ದಾಪುರ, ಬೆಳಸಲಿಗೆ ಕೃತಿ ಸಂಪುಟ - ೧

**ಪ್ರಸಂಗ ಪ್ರತಿ ಕೊಟ್ಟವರು:** ಲ. ನಾ. ಭಟ್

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ವಸುಮತಿ ಜಿ.

**ಅಂತರಜಾಲ ಪ್ರತಿ ಬರವಣಿಗೆ:** ಮನೋಜ್ ಭಟ್

**ಅಂತರಜಾಲ ಪ್ರತಿ ವಿನ್ಯಾಸ:** ವಿಂಧ್ಯಾಶ್ರೀ ಸೋಮಯಾಜಿ, ಅಜಿತ್ ಕಾರಂತ್

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ